ಸಂಪುಟ: 01 ಸಂಚಿಕೆ: 17 ಪುಟ: 04 ಬೆಲೆ: 02 ಭಾನುವಾರ ಜೂನ್ 21 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಜನರ ನುಡಿ.... ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:17 Pages:04 Price:02 SUNDAY JUNE 21 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಅಂತರಂಗದಿಂದ ಮಾಡಿದ ಸಹಾಯಕ್ಕೆ ಅಂತರ ಏರ್ಪಟ್ಟಾಗ ಮನಸ್ಸು ಆ ಕಾರ್ಯವನ್ನು ಎತ್ತಿ ಆಡುವಂತೆ ಪ್ರೇರಣೆ ನೀಡುವುದೇ ಮನುಜ ಸಹಜ ಗುಣವಾಗಿದೆ.



ವಾಣಿ ಭಂಡಾರಿ.

## 'ವಚನಾಮೃತ'

ಆಡಿಸುವವ ನೀನಾಗಿರಲು
ಕೈಯೊಳಡಗಿಹ ಬುಗುರಿ ಕಂಡು
ಬೇಡದ್ದೇಗಿರಲಿ ದೇವಾ!.
ಬೆಡಗಿನಾಟವ ನೋಡಲು
ಬಾಡಿಗೆ ಮನೆಯೊಳು ನಿಂದಿರೊ
ಹುಲುಮನ ಈ ಸತ್ಯವಾಣಿ!!.



ವಾಣಿ ಭಂಡಾರಿ.

# ಗ್ಯಾರಂಟಿ ಯೋಜನೆಗಳ ಪರಿಷ್ಕರಣೆಗೆ ಆಧುನಿಕ ಸ್ಪರ್ಶ ;ಪ್ರಿಯಾಂಕ್ ಖರ್ಗೆ

ಬೆಂಗಳೂರು: ಗ್ಯಾರಂಟಿ ಯೋಜನೆಗಳಷ್ಟೆ ಅಲ್ಲಾ ಸರ್ಕಾರದ ಎಲ್ಲಾ ಸೌಲಭ್ಯಗಳು ಅರ್ಹರಿಗೆ ಸಿಗಬೇಕು ಎಂಬ ಕಾರಣ-ಕ್ಕೆ ಸಮಗ್ರ ಪರಿಷ್ಕರಣೆ ನಡೆಸಲಾಗುತ್ತಿದೆ ಎಂದು ಮಾಹಿತಿ, ತಂತ್ರಜ್ಞಾನ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳ ಪರಿಷ್ಕರಣೆಯಲ್ಲಿ ತಪ್ಪಿಲ್ಲ. ಮೇಲ್ನೋಟಕ್ಕೆ ಕೆಲ ಯೋಜನೆಗಳ ಬಗ್ಗೆ ಮಾತ್ರ ಹೆಚ್ಚು ಚರ್ಚೆಯಾಗುತ್ತಿದೆ.

ಆದರೆ ಸರ್ಕಾರದ ಎಲ್ಲಾ ಯೋಜನೆಗಳಲ್ಲೂ ಅನರ್ಹರನ್ನು ಗುರುತಿಸಿ ತೆಗೆದು ಹಾಕಲು ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಲಿದೆ. ಈ ನಿಟ್ಟಿನಲ್ಲಿ ಇ-ಆಡಳಿತ ಇಲಾಖೆ ಕ್ರಮ ಕೈಗೊಳ್ಳುತ್ತಿದೆ ಎಂದರು.



ಗ್ಯಾರಂಟಿ ಯೋಜನೆಗಳಲ್ಲಿ ಒಬ್ಬ ಫಲಾನುಭವಿಯ ನಾಲ್ಕೈದು ಖಾತೆಗಳಿಗೆ ಸೌಲಭ್ಯಗಳು ತಲುಪುತ್ತಿವೆ. ಮೃತಪಟ್ಟವರ ಖಾತೆಗಳಿಗೂ ಹಣ ಸಂದಾಯವಾಗಿದೆ. ಹೊರ ರಾಜ್ಯದವರ ಹೆಸರಿಗೆ ಸೌಲಭ್ಯಗಳು ಹೋಗಿವೆ. ಈ ಎಲ್ಲಾ ಲೋಪಗಳನ್ನು ಸರಿಪಡಿಸಿ ಯೋಜನೆಗಳನ್ನು ಪರಿಷ್ಕರಣೆ ಮಾಡಲಾಗುವುದು ಎಂದರು.

ಮುಖ್ಯಮಂತ್ರಿಯವರು ಜನಸ್ಪಂದನ ಇಲಾಖೆಯ ಮೂಲಕ ಆಧುನಿಕ ತಂತ್ರಜ್ಞಾನದಲ್ಲಿ ಜನರ ಮನೆ ಬಾಗಿಲಿಗೆ ಆಡಳಿತ ತಲುಪಿಸಲಾಗುತ್ತದೆ. ತಾಲ್ಲೂಕು ಮಟ್ಟದಲ್ಲೇ ಜನರ ಸಮಸ್ಯೆ ಪರಿಹಾರಬೇಕು ಎಂಬ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ. ಇದಕ್ಕೆ ಮುಖ್ಯಮಂತ್ರಿಯವರ ಕಚೇರಿ ಹಾಗೂ ಇ-ಆಡಳಿತ ಜಂಟಿಯಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಬಿಡದಿ ಉಪನಗರ ನಿರ್ಮಾಣ ಯೋಜನೆಯಲ್ಲಿ ಜೆಡಿಎಸ್-ಬಿಜೆಪಿ ರಾಜಕೀಯ ಮಾಡುತ್ತಿವೆ. ಏಳುವರೆ ಸಾವಿರ ಎಕರೆಯಲ್ಲಿ ಈಗಾಗಲೇ

4ನೇ ಪುಟಕ್ಕೆ

## 'ಇಂದು ಪೈನಲ್ ಕ್ರಿಕೇಟ್ ಟೂರ್ನಾಮೆಂಟ್'

ಅ.ಶ. ಸುದ್ದಿ ಕುಕನೂರು

ಕುಕನೂರು: ಪಟ್ಟಣದ ಜವಳ ಕಾಲೋನಿ ನಿವಾಸಿ ಮುತ್ತು (ತಳ) ಪೂಜಾರ ಕ್ರಿಕೇಟ್ ಕ್ರೀಡೆಯಲ್ಲಿ ತಾಲ್ಲೂಕಲ್ಲದೇ ಜಿಲ್ಲಾ ಮಟ್ಟ ಹಾಗೂ ರಣಜಿಯಲ್ಲಿ ಉತ್ತಮ ಬ್ಯಾಟ್ಸ್ ಮನ್, ಬೌಲರ್ ಆಗಿ ಆಟವಾಡುತ್ತಿದ್ದ ಇತನು ಈಗ ಒಂದು ವರ್ಷದ ಹಿಂದೆ ಅನಾರೋಗ್ಯದಿಂದ ನಿಧನ ಹೊಂದಿದನು.



ಮುತ್ತು (ತಳ) ಎಂದೇ ಖ್ಯಾತಿಯ ಕ್ರೀಡಾಪಟುವಾಗಿದ್ದು, ಇತನು ಕುಕನೂರು ಪಟ್ಟಣ ಪಂಚಾಯತಿಯಲ್ಲಿ ನೀರುಗಂ-ಟಿಯಾಗಿಯು ಸಹ ಕೆಲಸ ನಿರ್ವಹಿಸುತ್ತಿದ್ದ, ಸದಾ ನಗು ಮೊಗದಿಂದ ಎಲ್ಲರೊಂದಿಗೆ ಸ್ನೇಹ ಜೀವಿಯಾಗಿದ್ದ. ಇತನಿಗೆ ಇರುವ ಕ್ರೀಡಾ ಆಸಕ್ತಿ ಪ್ರತಿಯೊಬ್ಬ-ರಿಗೂ ಸ್ಪೂರ್ತಿಯಾಗಲಿ ಎನ್ನುವ ಆಶಾಭಾವದೊಂದಿಗೆ ಇವರ ಸಹೋದರ ಜಗದೀಶ ಪೂಜಾರ ಜೂ.14ರಿಂದ ಕ್ರಿಕೇಟ್ ಟೂರ್ನಾಮೆಂಟ್ ಆಯೋಜನೆ ಮಾಡಿದ್ದು 21ರ ರವಿವಾರದಂದು ಪೈನಲ್ ಮ್ಯಾಚ್ ನಡೆಯಲಿದೆ ಎಂದು ಜಗದೀಶ ಪೂಜಾರ, ಶರೀಫ್ ಸಾಬ, ಪವನ್ ಕುಮಾರ , ಗೋಪಿ, ಪ್ರಸಾದ, ಗುರು ಪೂಜಾರ ತಿಳಿಸಿದರು.

# ಮತದಾರರ ಪಟ್ಟಿ ;ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಗಾರ

## ಯಶಸ್ವಿ ಮತದಾನ ಪ್ರಕ್ರಿಯೆಯಲ್ಲಿ ಅಧಿಕಾರಿಗಳ ಪಾತ್ರ ಬಹುಮುಖ್ಯ ; ಡಿ.ಸಿ ಸುರೇಶ ಬಿ.ಇಟ್ನಾಳ ಹೇಳಿಕೆ




ಅ.ಶ. ಸುದ್ದಿ ಕಾರಟಗಿ

ಕಾರಟಗಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಶೀಲನೆ ಪ್ರಕ್ರಿಯೆ ಎಲ್ಲ ರಾಜ್ಯಗಳಲ್ಲಿ ಪ್ರಾರಂಭವಾಗಿದೆ ಅದರಂತೆ ನಮ್ಮ ಜಿಲ್ಲೆಯಲ್ಲಿ ಜೂನ್. 30 ರಿಂದ ಜುಲೈ 29 ರವರೆಗೆ ಜರುಗಲಿರುವ ಕಾರ್ಯಕ್ಕೆ ಎಲ್ಲ ರಾಜಕೀಯ ಪಕ್ಷಗಳು, ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾ-ರಿಗಳಾದ ಸುರೇಶ ಬಿ. ಇಟ್ನಾಳ ಅವರು ಹೇಳಿದರು.

ನಗರದ ಆರ್ ಜಿ ರಸ್ತೆಯ ಪದ್ಮಶ್ರೀ ಕನ್ವೆನ್ಷನ್ ಹಾಲ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕನಕಗಿರಿ ವಿದಾನಸಭಾ ಕ್ಷೇತ್ರ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ 2026 ರ ಬೂತ್ ಲೆವೆಲ್ ಏಜೆಂಟ್ (ಬಿ.ಎಲ್.ಎ) ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯು, ಮತದಾರರು, ರಾಜಕೀಯ ಪಕ್ಷಗಳು ಮತ್ತು ಚುನಾವಣಾ ಸಿಬ್ಬಂದಿ ಒಳಗೊಂಡಂತಹ ಪಾರದರ್ಶಕ ಹಾಗೂ ಪಾಲ್ಗೊಳ್ಳುವಿಕೆಯ ಪ್ರಕ್ರಿಯೆಯಾಗಿದೆ. ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ, ಎನ್ಯೂಮರೇಶನ್ ಅರ್ಜಿಗಳನ್ನು ನೀಡಿ ಅವುಗಳನ್ನು ಸಂಗ್ರಹಿಸಲು ಕನಿಷ್ಠ ಮೂರು ಭಾರಿ ಭೇಟಿ ನೀಡುವರು.

ಮತದಾರರು ತಮ್ಮ ವಿವರಗಳನ್ನು ಹಿಂದಿನ ಎಸ್‌ಐಆರ್ ಮತದಾರರ ಪಟ್ಟಿಯ ಆಧಾರದ ಮೇಲೆ ಭರ್ತಿ ಮಾಡಿ ಅರ್ಜಿ ಜೊತೆಗೆ ಕೇಳಲಾದಂತಹ ಯಾವುದಾದರೊಂದು ದಾಖಲೆಗಳನ್ನು ಲಗತ್ತಿಸಿ ಬಿಎಲ್‌ಒಗಳಿಗೆ ನೀಡಬೇಕು. ನಗರ ಸೇರಿ ಗ್ರಾಮೀಣ ಭಾಗದಲ್ಲಿನ ಗ್ರಾಮ ಪಂಚಾಯತಿಗೊಂದು ಮತದಾರರ ನೆರವು ಕೇಂದ್ರ ತೆರೆಯಲಾಗಿದೆ. ಮತದಾರರು ಕೇಂದ್ರದ ಸದುಪಯೋಗ ಪಡೆದು ಮಾಹಿತಿ ಪಡೆದುಕೊಳ್ಳಬೇಕು ಎಂದರು. ನಂತರ ವಿವಿಧ ಪಕ್ಷದ ಮುಖಂಡರು, ಬಿಎಲ್ ಎಗಳು ತಮಗೆ ಎಸ್ ಐಆರ್ ಬಗ್ಗೆ ಇರುವ ಅನುಮಾನವಿರುವ ಪ್ರಶ್ನೆಗಳಿಗೆ ಜಿಲ್ಲಾಧಿಕಾರಿಗಳು ಸವಿಸ್ತಾರವಾಗಿ ಸ್ಪಷ್ಟವಾದ ಉತ್ತರವನ್ನು ಒದಗಿಸಿದರು.

ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳು ಹಾಗೂ ಕನಕಗಿರಿ ವಿಧಾನಸಭಾ ಕ್ಷೇತ್ರದ ಮತದಾರ ನೋಂದಣಾಧಿಕಾರಿಗಳಾದ ಟಿ.ಕೃಷ್ಣಮೂರ್ತಿ ಅವರು ಮಾತನಾಡಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಮುಖ್ಯ ಉದ್ದೇಶ ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸುವುದು ಮತ್ತು ಅನರ್ಹರರನ್ನು ನಿಯಮಾನುಸಾರ ಮತದಾರರ ಪಟ್ಟಿಯಿಂದ ಕೈಬಿಡುವುದಾಗಿದೆ ಎಂದರು. ಈ ವೇಳೆ ತಹಸೀಲ್ದಾರ್ ಗಳಾದ ಎಂ.ಕುಮಾರಸ್ವಾಮಿ, ಚಂದ್ರಶೇಖರ ಗಾಳಿ, ಕಾರ್ಯನಿರ್ವಾಹಕ ಅಧಿಕಾ-ರಿಗಳಾದ ಲಕ್ಷ್ಮೀದೇವಿ ಯಾದವ್, ಚಂದ್ರಶೇಖರ ಕೆ., ಗ್ರೇಡ್- 2 ತಹಸೀಲ್ದಾರ್ ವಿಶ್ವೇಶ್ವರಯ್ಯ ಸಾಲಿಮಠ, ಸಿದ್ದಾಪುರ ಹೋಬಳಿಯ ಉಪ ತಹಸೀಲ್ದಾರ್ ಗಿರಿಸ್ವಾಮಿ, ಕಂದಾಯ ನಿರೀಕ್ಷರಾದ ಸಂಗಮ್ಮ ಹೀರೆಮಠ, ಶರಣಪ್ಪ, ಕಾರಟಗಿ ಪುರಸಭೆಯ ಅಧ್ಯಕ್ಷರಾದ ಮಂಜುನಾಥ್ ಮೆಗೂರು ಸೇರಿ ಜಿಲ್ಲಾ ಹಾಗೂ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಕೆಡಿಪಿ ಸದಸ್ಯರು, ವಿವಿಧ ಪಕ್ಷದ ರಾಜಕೀಯ ಮುಖಂಡರು, ಸೇರಿದಂತೆ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು, ಬಿಎಲ್ ಎಗಳು, ಗಣಕಯಂತ್ರ ನಿರ್ವಾಹಕರು, ಇದ್ದರು.

# ಹಿರಿಯರ ಹೆಸರಿನಲ್ಲಿ ಸಸಿ ನೆಡಬೇಕು : ಗೀತಾ ಚೌದರಿ

ಅ.ಶ. ಸುದ್ದಿ ಗಂಗಾವತಿ

ಗಂಗಾವತಿ: ಹಿರೇಜಂತಕಲ್‌ನ ಹುಮಾ ಆಂಗ್ಲ ಮಾದ್ಯಮ ಶಾಲೆಯಲ್ಲಿ ಇಂದು ಪರಿಸರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರೋಟರಿ ಕ್ಲಬ್ ರೈಸ್ ಮಿಲ್ ಅಧ್ಯಕ್ಷೆ ಗೀತಾ ಚೌದರಿ ಅವರು ವಿದ್ಯಾರ್ಥಿಗಳಿಗೆ ಸಸಿಗಳನ್ನು ವಿತರಿಸಿ, ಪ್ರತಿಯೊಬ್ಬರೂ ತಮ್ಮ ತಂದೆ-ತಾಯಿಯ ಹೆಸರಲ್ಲಿ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸುವಂತೆ ಕರೆ ನೀಡಿದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಮರಗಳನ್ನು ಬೆಳೆಸುವುದರಿಂದ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ನೀಡಬಹುದು ಎಂದು ಅವರು ತಿಳಿಸಿದರು. ಮಕ್ಕಳಲ್ಲಿ ಪರಿಸರದ ಬಗ್ಗೆ ಕಾಳಜಿ ಮತ್ತು ಜಾಗೃತಿ ಮೂಡಿಸುವ




ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ರೋಟರಿ ಕ್ಲಬ್ ಸದಸ್ಯರಾದ ಸೋಪಿಯರಾಣಿ,ಶ್ರೀದೇವಿ, ಬಸಮ್ಮ, ನಾಗವೀಣೆ, ರಾಜೇಶ್ವರಿ, ನಾಗರತ್ನ, ಹಾಗೂ ಸಂಸ್ಥೆಯ ಅಧ್ಯಕ್ಷರು ಹಾಗೂ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ, ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು. ಕಾರ್ಯಕ್ರಮವು ಅರ್ಥಪೂರ್ಣವಾಗಿ ನಡೆಯಿತು.

# ಕರ್ನಾಟಕ : ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಇಳಿಕೆ

ಅ.ಶ. ಸುದ್ದಿ ಬೆಂಗಳೂರು

ಬೆಂಗಳೂರು: ರಾಜ್ಯದ ವಾಣಿಜ್ಯ ತೆರಿಗೆಗಳ ಸಂಗ್ರಹದಲ್ಲಿ ಇಳಿಕೆಯಾಗಿದೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಏಪ್ರಿಲ್ ತಿಂಗಳಿಗಿಂತ ಮೇ ತಿಂಗಳಿನಲ್ಲಿ ಒಂದೂವರೆ ಸಾವಿರ ಕೋಟಿ ರೂ.ಗೂ ಹೆಚ್ಚು ವಾಣಿಜ್ಯ ತೆರಿಗೆಗಳ ಸಂಗ್ರಹ ಕಡಿಮೆಯಾಗಿದೆ. ವಾಣಿಜ್ಯ ತೆರಿಗೆಗಳ ಇಲಾಖೆಯ ಮಾಹಿತಿ ಪ್ರಕಾರ, ಮೇ ತಿಂಗಳಿನಲ್ಲಿ ಒಟ್ಟು 9,902.58 ಕೋಟಿ ರೂ. ಸಂಗ್ರಹವಾಗಿದೆ. ಏಪ್ರಿಲ್ ತಿಂಗಳಿಗೆ ಹೋಲಿಸಿದರೆ 1526.4 ಕೋಟಿಯಷ್ಟು ವಾಣಿಜ್ಯ ತೆರಿಗೆಗಳ ಸಂಗ್ರಹ ಕಡಿಮೆಯಾಗಿದೆ.

ಏಪ್ರಿಲ್ ತಿಂಗಳಿನಲ್ಲಿ 11,428.98 ಕೋಟಿ ರೂ.ನಷ್ಟು ಸಂಗ್ರಹವಾಗಿತ್ತು. ಮೇ ತಿಂಗಳಿನಲ್ಲಿ 7,228.77 ಕೋಟಿ ರೂ. ಸರಕು ಸೇವಾ ತೆರಿಗೆ, 2537.39 ಕೋಟಿ ರೂ. ಕರ್ನಾಟಕ ಮಾರಾಟ ತೆರಿಗೆ ಹಾಗೂ 136.42




ಕೋಟಿ ರೂ. ಸಂಗ್ರಹವಾಗಿದೆ. ಕಳೆದ ಎರಡು ತಿಂಗಳಲ್ಲಿ 4,800.11 ಕೋಟಿ ರೂ. ಕರ್ನಾಟಕ ಮಾರಾಟ ತೆರಿಗೆ, 16,176.69 ಕೋಟಿ ರೂ. ಸರಕು ಸೇವಾ ತೆರಿಗೆ ಹಾಗೂ 354.96 ಕೋಟಿ ರೂ. ವೃತ್ತಿ ತೆರಿಗೆ ಸೇರಿದಂತೆ ಒಟ್ಟು 21,331.56 ಕೋಟಿ ರೂ. ಸಂಗ್ರಹವಾಗಿದೆ. 2025 -26ನೇ ಸಾಲಿನಲ್ಲಿ ಒಟ್ಟು 1,10,813.30 ಕೋಟಿ ರೂ.ನಷ್ಟು ವಾಣಿಜ್ಯ ತೆರಿಗೆಗಳ ಸಂಗ್ರಹವಾಗಿತ್ತು. ಇದು 2024-25ನೇ ಸಾಲಿಗಿಂತ ಹೆಚ್ಚಾಗಿತ್ತು. ಪ್ರಸಕ್ತ ಸಾಲಿನಲ್ಲಿ ಕಳೆದ ಆರ್ಥಿಕ ಸಾಲಿಗಿಂತಲೂ ಹೆಚ್ಚಿನ ವಾಣಿಜ್ಯ ತೆರಿಗೆಗಳ ಸಂಗ್ರಹವಾಗುವ ನಿರೀಕ್ಷೆಯಿದೆ.

# ಶಾಲಾ ವಿದ್ಯಾರ್ಥಿಗೆ ಪ್ರವೇಶ ನಿರಾಕರಣೆ ; ದೂರು ಕೊಟ್ಟರೂ ಮೌನವಾದ ಶಿಕ್ಷಣ ಇಲಾಖೆ

ಅ.ಶ. ಸುದ್ದಿ ಕಾರಟಗಿ

ಕಾರಟಗಿ: ಪಟ್ಟಣದ ಅನುದಾನಿತ ಶಾಲೆ ಶ್ರೀ ಶರಣಬಸವೇಶ್ವರ ಕನ್ನಡ ಮಾಧ್ಯಮ ಪ್ರೌಢಶಾಲೆ ಆಡಳಿತ ಸಿಬ್ಬಂದಿ ಮತ್ತು ಶಿಕ್ಷಕರು ವಿದ್ಯಾರ್ಥಿಯ ಪ್ರವೇಶ ನಿರಾಕರಣೆ ಮಾಡಿ ಅವಮಾನಿಸಿದ ಘಟನೆ ನಡೆದಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳ ಪ್ರವೇಶವನ್ನು ನಿರಾಕರಣೆ ಮಾಡುವಂತಿಲ್ಲ. ಕಡ್ಡಾಯವಾಗಿ ಪ್ರವೇಶ ಬಯಸಿದ ವಿದ್ಯಾರ್ಥಿಗಳ ಪ್ರವೇಶ ಪಡೆದು ವಿದ್ಯಾರ್ಥಿಗಳಿಗೆ ಉತ್ತಮ ಮತ್ತು ಮೌಲ್ಯಯುತ ಶಿಕ್ಷಣವನ್ನು ನೀಡುವುದು ಕಡ್ಡಾಯವಾಗಿದೆ.

ಒಂದು ವೇಳೆ ವಿದ್ಯಾರ್ಥಿಗಳ ಪ್ರವೇಶ ನಿರಾಕರಿಸಿದರೆ ಶಿಕ್ಷಣ ಇಲಾಖೆ ಅಂತಹ ಶಾಲೆ ಸಂಸ್ಥೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರಗಿಸಲು ಶಿಕ್ಷಣ ಇಲಾಖೆಯ ಕಟ್ಟುನಿಟ್ಟಿನ ಆದೇಶಗಳು ಕೂಡ ಜಾರಿಯಲ್ಲಿವೆ. ಆದರೆ ಜಿಲ್ಲೆಯ ಕಾರಟಗಿ ಪಟ್ಟಣದ ಶ್ರೀ ಶರಣಬಸವೇಶ್ವರ ಕನ್ನಡ ಮಾಧ್ಯಮ ಅನುದಾನಿತ ಶಾಲೆಯಲ್ಲಿ 2026/27 ರ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಮುಖ್ಯಪಾಧ್ಯಾಯರು ಮತ್ತು ಆಡಳಿತ ವರ್ಗ ವಿದ್ಯಾರ್ಥಿಗಳ ಪ್ರವೇಶವನ್ನು ನಿರಾಕರಿಸುವ ಘಟನೆ ಬೆಳಕಿಗೆ ಬಂದಿದೆ. ಹೌದು ಒಂಬತ್ತನೆಯ ತರಗತಿಗೆ ಪ್ರವೇಶಕ್ಕೆ ಬಂದ ಹೇಮಂತ್ ತಂದೆ ಸುಂದರರಾಜ್ ಎಂಬ ವಿದ್ಯಾರ್ಥಿಯ 9ನೇ ತರಗತಿಗೆ ಪ್ರವೇಶ ನಿರಾಕರಣೆ ಮಾಡಿದ್ದಾರೆ. ಪ್ರವೇಶಕ್ಕೆ ಬಂದ ವಿದ್ಯಾರ್ಥಿಯನ್ನು ಆಡಳಿತ ಮಂಡಳಿ ಮತ್ತು ಮುಖ್ಯೋಪಾಧ್ಯಾಯರು ಒಂದು ವಾರದವರೆಗೆ ಶಾಲೆಗೆ ಕಳುಹಿಸಿರಿ ನಂತರ




ಪ್ರವೇಶ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು.


ಅದರಂತೆ ವಿದ್ಯಾರ್ಥಿ ಶಾಲೆಗೆ ಬಂದಿರುತ್ತಾನೆ, ತದನಂತರ ಪಾಲಕರು ದಾಖಲಾತಿಗಳನ್ನು ಪ್ರವೇಶ ಮಾಡಿಸಲು ಹೋದಾಗ ಈ ವರ್ಷ ನಾವು ಯಾವುದೇ ವಿದ್ಯಾರ್ಥಿಯ ಪ್ರವೇಶವನ್ನು ತೆಗೆದುಕೊಂಡಿಲ್ಲ ಅಂತೆಯೇ ನಿಮಗೆ ಪ್ರವೇಶ ನೀಡುವುದಿಲ್ಲ ಎಂದು ಉಡಾಫೆ ಉತ್ತರ ನೀಡಿ ಶಿಕ್ಷಣ ಇಲಾಖೆಯ ಪ್ರವೇಶ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಅವಮಾನಿಸಿದ್ದಾರೆ. ಈ ಬಗ್ಗೆ ವಿದ್ಯಾರ್ಥಿಯ ಪಾಲಕರು ಮಾತನಾಡಿ, ಶಾಲೆಯಲ್ಲಿ ಪ್ರವೇಶ ಕೊಡಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ನೀಡಿದ್ದೇವೆ ಆದರೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ಕುರಿತು ಸರಿಯಾಗಿ ಸ್ಪಂದನೆ ನೀಡಿರುವುದಿಲ್ಲ. ನಾವು ಶಾಲಾ ಸಂಸ್ಥೆಗೆ ಪತ್ರ ಬರೆಯುತ್ತೇವೆ ಪತ್ರಕ್ಕೆ ಉತ್ತರ ಬಂದ ನಂತರವೇ ನಿಮಗೆ ಪ್ರವೇಶ ಕೊಡಿಸಲಾಗುತ್ತದೆ ಸುಮಾರು 15 ದಿನಗಳವರೆಗೆ ಸಮಯಾವಕಾಶ ಬೇಕಾಗುತ್ತದೆ ಎಂದು ಹೇಳಿದ್ದಾರೆ.

ಮಗುವಿನ ಶಿಕ್ಷಣಕ್ಕೆ ತೊಂದರೆಯಾಗುತ್ತದೆ ಆದಷ್ಟು ಬೇಗ ಪ್ರವೇಶ ಕೊಡಿಸಿ ಎಂದು ಕೇಳಿದರೆ ಯಾವುದೇ ಸ್ಪಷ್ಟವಾದ ಪ್ರತ್ಯುತ್ತರ ನೀಡಿರುವುದಿಲ್ಲ. ಶಿಕ್ಷಣ ಸಂಯೋಜಕರನ್ನು ಕೇಳಿದರೆ ಆಡಳಿತ ಮಂಡಳಿ ಪ್ರವೇಶ ಕೊಡೋದಿಲ್ಲ ಅಂತ ಹೇಳುತ್ತಿದ್ದಾರೆ ನನಗೇನು ಮಾಡಕ್ಕಾಗಲ್ಲ ಎಂದು ಬೇಜವಾಬ್ದಾರಿ ಮಾತುಗಳನ್ನಾಡಿದ್ದಾರೆ. ಶಿಕ್ಷಣ ಇಲಾಖೆಯ ನಿಯಮಗಳನ್ನು ಪಾಲಿಸಬೇಕಾದ ಅಧಿಕಾರಿಗಳೇ ಅಸಹಾಯಕರಾಗಿ, ಆದೇಶಗಳನ್ನು ಗಾಳಿಗೆ ತೂರಿದ್ದಾರೆ. ಈ ಕುರಿತು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮತ್ತು ರಾಜ್ಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ದೂರು ನೀಡುತ್ತೇನೆ ಎಂದು ತಿಳಿಸಿದರು.

# ಅಂದಪ್ಪ ಕುರಿ ವಯೋ ನಿವೃತ್ತಿ ;ಅಭಿನಂದನಾ ಕಾರ್ಯಕ್ರಮ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ತಾಲೂಕಿನ ಬಳೂಟಗಿ ಗ್ರಾಮದ ಅರಣ್ಯ ಇಲಾಖೆಯ ನಿವೃತ್ತ ಉಪ ಅರಣ್ಯ ವಲಯ ಅಧಿಕಾರಿ ಅಂದಪ್ಪ ಕುರಿಯವರ ವಯೋನಿವೃತ್ತಿ ಅಂಗವಾಗಿ ಗ್ರಾಮದಲ್ಲಿ ಅಭಿನಂದನಾ ಹಾಗೂ ಕೃತಜ್ಞತಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ವಿವಿಧ ಕ್ಷೇತ್ರಗಳ ಗಣ್ಯರು, ಅರಣ್ಯ ಇಲಾಖೆಯ ಅಧಿಕಾರಿಗಳು, ಜನಪ್ರತಿನಿಧಿಗಳು, ಗ್ರಾಮಸ್ಥರು ಹಾಗೂ ಹಿತೈಷಿಗಳು ಭಾಗವಹಿಸಿ ಅಂದಪ್ಪ ಕುರಿಯವರ ಸೇವಾ ಸಾಧನೆಯನ್ನು ಸ್ಮರಿಸಿ ಅಭಿನಂದಿಸಿದರು.**



ಕಾರ್ಯಕ್ರಮವನ್ನು ಪರಿಸರ ಸಂರಕ್ಷಣೆಯ ಸಂಕೇತವಾಗಿ ಸಸಿಗೆ ನೀರುಣಿಸುವ ಮೂಲಕ ಗಣ್ಯರು ಹಾಗೂ ಪೂಜ್ಯರು ಉದ್ಘಾಟಿಸಿದರು. ಸಮಾರಂಭದ ಸಾನಿಧ್ಯ ವಹಿಸಿದ್ದ ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಮಾತನಾಡಿ, "ಅಂದಪ್ಪ ಕುರಿಯವರು ಕೇವಲ ಅರಣ್ಯ ಇಲಾಖೆಯ ಅಧಿಕಾರಿಯಾಗಿ ಸೇವೆ ಸಲ್ಲಿಸಿಲ್ಲ. ಅವರು ಮನುಕುಲದ ಒಳಿತಿಗಾಗಿ ವೃಕ್ಷದೀಪ ಹಚ್ಚಿದ ಮಹನೀಯರು. ರಸ್ತೆ ಬದಿಗಳಲ್ಲಿ, ಗ್ರಾಮಗಳ ಸುತ್ತಮುತ್ತ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅವರು ನೆಟ್ಟು ಪೋಷಿಸಿದ ಸಾವಿರಾರು ಮರಗಳು ಇಂದು ಅವರ ಸೇವೆಗೆ ಜೀವಂತ ಸಾಕ್ಷಿಯಾಗಿವೆ. ಮನುಷ್ಯನ ಜೀವನಕ್ಕಿಂತ ಮರಗಳ ಜೀವನ ದೀರ್ಘವಾದುದು.

ಅಂದಪ್ಪ ಕುರಿಯವರು ಬೆಳೆಸಿದ ಮರಗಳು ಮುಂದಿನ ಪೀಳಿಗೆಗೂ ನೆರಳು, ಆಮ್ಲಜನಕ ಮತ್ತು ಬದುಕನ್ನು ನೀಡಲಿವೆ. ಆದ್ದರಿಂದ ಅವರ ಪರಿಸರ ಸಂರಕ್ಷಣೆಯ ಕಾರ್ಯ ಸಮಾಜಕ್ಕೆ ಮಾದರಿಯಾಗಿದೆ" ಎಂದು ಹೇಳಿದರು.

ಪರಿಸರ ಮಾಲಿನ್ಯ, ಅರಣ್ಯ ನಾಶ ಮತ್ತು ಹವಾಮಾನ ವೈಪರೀತ್ಯಗಳು ವಿಶ್ವದ ದೊಡ್ಡ ಸವಾಲುಗಳಾಗಿವೆ. ಇಂತಹ ಸಂದರ್ಭದಲ್ಲಿ ಅಂದಪ್ಪ ಕುರಿಯವರಂತಹ ಪರಿಸರ ಪ್ರೇಮಿಗಳ ಕಾರ್ಯಗಳು ಅತ್ಯಂತ ಮಹತ್ವದ್ದಾಗಿವೆ. 'ಹಸಿರು ಉಳಿಸಿದರೆ ಭವಿಷ್ಯ ಉಳಿಯುತ್ತದೆ' ಎಂಬ ಸಂದೇಶವನ್ನು ಅವರು ತಮ್ಮ ಬದುಕಿನ ಮೂಲಕವೇ ಸಾರಿದ್ದಾರೆ ಎಂದು ಗವಿಶ್ರೀಗಳು ಆಶೀರ್ವಚನ ನೀಡಿದರು. ಮಾಜಿ ಸಚಿವ ಹಾಲಪ್ಪ ಆಚಾರ್ ಮಾತನಾಡಿ, "ಅಂದಪ್ಪ ಕುರಿಯವರು ಸರ್ಕಾರಿ ಅಧಿಕಾರಿಯಾಗಿ ಮಾತ್ರವಲ್ಲ, ಜನಸ್ನೇಹಿ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದಾರೆ. ರೈತರು, ಗ್ರಾಮಸ್ಥರು ಮತ್ತು ಅರಣ್ಯ ಇಲಾಖೆಯ ನಡುವಿನ ಉತ್ತಮ ಬಾಂಧವ್ಯ ನಿರ್ಮಿಸಲು ಶ್ರಮಿಸಿದ್ದಾರೆ. ಪರಿಸರ ಹಾಗೂ ವನ್ಯಜೀವಿ ಸಂರಕ್ಷಣೆಯಲ್ಲಿ ಅವರು ಸಲ್ಲಿಸಿದ ಸೇವೆ ಶ್ಲಾಘನೀಯ.

ಯಲಬುರ್ಗಾ ತಾಲೂಕಿನ ಹೆಮ್ಮೆಯ ಅಧಿಕಾರಿಯಾಗಿ ಅವರು ನಿವೃತ್ತರಾಗಿದ್ದು, ಅವರ ಅನುಭವ ಮತ್ತು ಮಾರ್ಗದರ್ಶನ ಮುಂದೆಯೂ ಸಮಾಜಕ್ಕೆ ಅಗತ್ಯವಾಗಿದೆ" ಎಂದರು. ಕೊಪ್ಪಳ ಸಾಮಾಜಿಕ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುಸೇನ ಪಾಷಾ ಪೆಂಡಾರಿ ಮಾತನಾಡಿ, "ಅಂದಪ್ಪ ಕುರಿಯವರು ಇಲಾಖೆಯಲ್ಲಿ ಶಿಸ್ತು, ಪ್ರಾಮಾಣಿಕತೆ ಮತ್ತು ಕರ್ತವ್ಯನಿಷ್ಠೆಗೆ ಹೆಸರಾಗಿದ್ದರು. ಇಲಾಖೆಯ ಬಗ್ಗೆ ಅಪಾರ ಅಭಿಮಾನ ಹೊಂದಿದ್ದ ಅವರು ತಮ್ಮ ಕರ್ತವ್ಯವನ್ನು ಕೇವಲ ಕೆಲಸವೆಂದು ನೋಡದೆ ಪರಿಸರ ಮತ್ತು ಜೀವಸಂಕುಲದ ರಕ್ಷಣೆಯ ಸೇವೆಯಾಗಿ ನಿರ್ವಹಿಸಿದರು. ಇಲಾಖೆಯ ಯುವ ಸಿಬ್ಬಂದಿಗೆ ಅವರು ಸದಾ ಪ್ರೇರಣೆಯಾಗಿದ್ದಾರೆ" ಎಂದು ಹೇಳಿದರು.

ಮುನಿರಾಬಾದ್, ಸಂಡೂರು, ಬೆಟಗೇರಿ, ಇರಕಲ್ಲಗಡ ಹಾಗೂ ಯಲಬುರ್ಗಾ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದ ಅವರು ಸಾವಿರಾರು ಗಿಡಗಳನ್ನು ನೆಟ್ಟು ಬೆಳೆಸುವ ಮೂಲಕ ಹಸಿರೀಕರಣ ಚಳವಳಿಗೆ ಹೊಸ ಚೈತನ್ಯ ನೀಡಿದರು. ಗಿಡಗಳನ್ನು ನೆಡುವುದಷ್ಟೇ ಅಲ್ಲದೆ ಅವುಗಳನ್ನು ಉಳಿಸಿ ಬೆಳೆಸುವತ್ತ ವಿಶೇಷ ಗಮನ ಹರಿಸಿದರು. ಕಲ್ಯಾಣ ಕರ್ನಾಟಕದ ಬಿಸಿಲಿನ ಪ್ರದೇಶಗಳಲ್ಲಿಯೂ ಗಿಡಗಳನ್ನು ಸಂರಕ್ಷಿಸಿ ಯಶಸ್ವಿಯಾಗಿರುವುದು ಅವರ ವಿಶೇಷ ಸಾಧನೆಯಾಗಿದೆ. ವನ್ಯಜೀವಿಗಳ ರಕ್ಷಣೆಯಲ್ಲಿಯೂ ಅವರು ಮಹತ್ವದ ಪಾತ್ರ ವಹಿಸಿದ್ದಾರೆ. ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ಸಂಕಷ್ಟಕ್ಕೀಡಾಗುವ ಕಾಡುಪ್ರಾಣಿಗಳಿಗಾಗಿ ನೀರಿನ ತೊಟ್ಟಿಗಳು, ಹೊಂಡಗಳು ಹಾಗೂ ಸಣ್ಣ ಕೆರೆಗಳನ್ನು ನಿರ್ಮಿಸಿ ಜೀವ ಸಂಕುಲ ಸಂರಕ್ಷಣೆಗೆ ಶ್ರಮಿಸಿದ್ದಾರೆ.

ಗ್ರಾಮಗಳಿಗೆ ಬಂದ ಕರಡಿಗಳು ಸೇರಿದಂತೆ ಹಲವು ಕಾಡುಪ್ರಾಣಿಗಳನ್ನು ಸುರಕ್ಷಿತವಾಗಿ ಹಿಡಿದು ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಿ ಜನರ ಹಾಗೂ ಪ್ರಾಣಿಗಳ ಸುರಕ್ಷತೆಯನ್ನು ಕಾಪಾಡಿದ್ದಾರೆ. ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ಒಂದು ತಿಂಗಳ ವೇತನವನ್ನು ಸರ್ಕಾರದ ನೆರವಿನ ನಿಧಿಗೆ ನೀಡಿ, ನೂರಾರು ಬಡ ಕುಟುಂಬಗಳಿಗೆ ಆಹಾರ ಕಿಟ್‌ಗಳನ್ನು ವಿತರಿಸುವ ಮೂಲಕ ಮಾನವೀಯತೆಯ ಉದಾತ್ತ ಉದಾಹರಣೆಯಾದರು. ಸಮಾಜ ಸೇವೆಯನ್ನು ಎಂದಿಗೂ ಪ್ರಚಾರದ ಸಾಧನವಾಗಿಸಿಕೊಳ್ಳದೆ ಮೌನವಾಗಿ ನೆರವು ನೀಡುತ್ತಾ ಬಂದಿರುವುದು ಅವರ ವ್ಯಕ್ತಿತ್ವದ ವಿಶೇಷತೆಯಾಗಿದೆ.

ಈ ಸಂದರ್ಭದಲ್ಲಿ ಮುಖಂಡರಾದ ಈರಣ್ಣ ಗೋಗೇರಿ, ಅಂದಾನಗೌಡ್ರ, ಸಿದ್ದಯ್ಯ ಹಿರೇಮಠ ಹಾಗೂ ಅರಣ್ಯ ಇಲಾಖೆಯ ನಿರ್ಮಲಾ ಎನ್.ಕೆ. ಅವರು ಅಂದಪ್ಪ ಕುರಿಯವರ ಸೇವಾ ಅವಧಿಯ ವಿವಿಧ ನೆನಪುಗಳನ್ನು ಹಂಚಿಕೊಂಡು ಅಭಿನಂದಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅಂದಪ್ಪ ಕುರಿಯವರು, "ನನ್ನ ಸೇವಾ ಜೀವನದ ಯಶಸ್ಸಿಗೆ ಇಲಾಖೆಯ ಮೇಲಾಧಿಕಾರಿಗಳು, ಸಹೋದ್ಯೋಗಿಗಳು, ಜನಪ್ರತಿನಿಧಿಗಳು, ಗ್ರಾಮಸ್ಥರು ಹಾಗೂ ಕುಟುಂಬದವರ ಸಹಕಾರವೇ ಕಾರಣ. ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ನಿವೃತ್ತಿಯ ನಂತರವೂ ಪರಿಸರ ಮತ್ತು ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವೆ" ಎಂದು ಭಾವನಾತ್ಮಕವಾಗಿ ನುಡಿದರು.

ಕಾರ್ಯಕ್ರಮದಲ್ಲಿ ಮುಖಂಡರು, ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಗ್ರಾಮಸ್ಥರು ಹಾಗೂ ಕುಟುಂಬ ಸದಸ್ಯರು ಅಂದಪ್ಪ ಕುರಿಯವರನ್ನು ಸನ್ಮಾನಿಸಿ ನಿವೃತ್ತಿ ಜೀವನಕ್ಕೆ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಅಂದಪ್ಪ ಕುರಿ ದಂಪತಿ ತಮ್ಮ 32ನೇ ವಿವಾಹ ವಾರ್ಷಿಕೋತ್ಸವವನ್ನು ಸಸಿ ನೆಡುವ ಮೂಲಕ ಹಾಗೂ ಕೇಕ್ ಕತ್ತರಿಸಿ ಆಚರಿಸಿಕೊಂಡಿದ್ದು ವಿಶೇಷ ಆಕರ್ಷಣೆಯಾಗಿತ್ತು. ಮುಖಂಡರಾದ ಶರಣಪ್ಪ ಗಾಂಜಿ, ಹಂಪಯ್ಯ ಸ್ವಾಮಿ ಸೇರಿದಂತೆ ತಾಲ್ಲೂಕಿನ ಅನೇಕ ಗಣ್ಯರು, ಅಧಿಕಾರಿಗಳು, ಅರಣ್ಯ ಇಲಾಖೆಯ ಸಿಬ್ಬಂದಿ, ಹಿತೈಷಿಗಳು ಹಾಗೂ ಗ್ರಾಮದ ನಾಗರಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಅಂದಪ್ಪ ಕುರಿಯವರ ಸೇವಾ ಸಾಧನೆಯನ್ನು ಕೊಂಡಾಡಿದರು. ಅವರ ನಿವೃತ್ತಿಯ ನಂತರವೂ ಪರಿಸರ ಮತ್ತು ಸಮಾಜ ಸೇವೆಯ ಪಯಣ ಇನ್ನಷ್ಟು ವಿಸ್ತಾರವಾಗಲಿ ಎಂದು ಹಾರೈಸಿದರು.

1ನೇ ಪುಟದಿಂದ....


ಆರು ಸಾವಿರ ಎಕರೆಯ ಭೂ ಮಾಲೀಕರು ಭೂಸ್ವಾಧೀನಕ್ಕೆ ತಮ್ಮ ಸಹಮತ ವ್ಯಕ್ತ ಪಡಿಸಿದ್ದಾರೆ. 1,340 ಎಕರೆಯಷ್ಟು ಮಾತ್ರ ಬಾಕಿ ಇದೆ. ಸರ್ಕಾರ ದಬ್ಬಾಳಿಕೆ ಮಾಡಿ ಯಾರಿಂದಲೂ ಭೂಮಿ ಕಸಿದುಕೊಳ್ಳುವುದಿಲ್ಲ ಎಂದು ಸ್ಪಷ್ಟ ಪಡಿಸಿದರು. ದೇವನಹಳ್ಳಿಯ ಬಳಿಯ ಭೂ ಸ್ವಾಧೀನವಾದಾಗ ಪ್ರತಿಭಟನೆಗಳಾದವು. ಸರ್ಕಾರ ರೈತರ ಅಭಿಪ್ರಾಯದಂತೆ ಭೂ ಸ್ವಾಧೀನವನ್ನು ಕೈ ಬಿಡುವ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿತ್ತು. ಈಗ ಅಲ್ಲಿ ವಿಶೇಷ ಕೃಷಿ ವಲಯವನ್ನು ಮುಂದುವರೆಸಬೇಕೋ ಬೇಡವೋ ಎಂಬ ಚರ್ಚೆ ನಡೆಯುತ್ತಿದೆ. ಕೆಲವು ರೈತರು ಕೃಷಿ ವಲಯವನ್ನೇ ಮುಂದುವರೆಸಿ ಎಂದಿದ್ದರು. ಇನ್ನೂ ಕೆಲವು ರೈತರು ಮುಂದಿನ ಪೀಳಿಗೆಗೆ ಕೈಗಾರಿಕೆ ಬೇಕು ಎಂದು ಮನವಿ ಸಲ್ಲಿಸಿದ್ದಾರೆ. ಅವರ ಮನವಿ ಆಧರಿಸಿ ಇಂದಿನ ಸಚಿವ ಸಂಪುಟದಲ್ಲಿ ಚರ್ಚೆ ನಡೆಸಲಾಗುವುದು, ಜನಾಭಿಪ್ರಾಯದಂತೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು. ಬಿಡದಿ ಬಳಿ ಪ್ರತಿಭಟನೆ ನಡೆಸುವ ಬಿಜೆಪಿ-ಜೆಡಿ-ಎಸ್ ನವರು ಕೇಂದ್ರ ಸರ್ಕಾರ 100 ಸ್ಮಾರ್ಟ್ ಸಿಟಿಗಳನ್ನು ಹೇಗೆ ಮಾಡಲು ಮುಂದಾಗಿದೆ ಎಂದು ಹೇಳುತ್ತಾರೆಯೇ ? ರಾಜಸ್ತಾನದಲ್ಲಿ ಅರಾವಳಿಯನ್ನೇ ಅದಾನಿಗೆ ಮಾರಲು ಮುಂದಾಗಿದ್ದರು. ಅಂಡಾಮಾನ್ ನಿಕೋಬಾರ್ ನ ವಿಚಾರವನ್ನು ಬಿಡದಿಗೆ ಹೋಲಿಸುತ್ತಿದ್ದಾರೆ. ಜೀವ ವೈವಿಧ್ಯತೆ ಹೊಂದಿದ್ದ ಅಂಡೋಮಾನ್-ನಿಕೋಬಾರ್ ಅನ್ನು ಸಂಪೂರ್ಣ ನಾಶ ಮಾಡಲು ಹೊರಟ್ಟಿದ್ದು ಯಾರು ಎಂದು ಪ್ರಿಯಾಂಕ್ ಪ್ರಶ್ನಿಸಿದರು. ನಗರೀಕರಣ ವೇಗವಾಗಿ ಬೆಳೆಯುತ್ತಿದೆ. ಪರಿಸರ ಹಾಗೂ ನಗರೀಕರಣ ಎರಡರಲ್ಲೂ ಸಮತೋಲನ ಕಾಯ್ದುಕೊಳ್ಳಲು ತಮ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಹೇಳಿದರು. ಜೆಡಿಎಸ್-ಬಿಜೆಪಿ ನಾಯಕರು ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಸರಿ ಇಲ್ಲ ಎಂದು ಆ ಪಕ್ಷಗಳ ಶಾಸಕರೆ ಬೇಸತ್ತು ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅಡ್ಡ ಮತದಾನ ಮಾಡಿದ್ದಾರೆ. ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ ಹಾಕದೆ ಇದ್ದಿದ್ದರೆ ಬಿಜೆಪಿ ಅಭ್ಯರ್ಥಿಯೇ ಸೋಲು ಕಾಣುತ್ತಿದ್ದರು ಎಂದರು. ಹಿಂದೆ ಅಸ್ಸಾಂ, ಜಾರ್ಖಾಂಡ್, ಪಶ್ಚಿಮ ಬಂಗಾಳ, ಅರುಣಾಚಲ ಪ್ರದೇಶ, ಮಹಾರಾಷ್ಟ್ರ, ಮಧ್ಯ ಪ್ರದೇಶ ಸೇರಿ ವಿವಿಧ ರಾಜ್ಯಗಳಲ್ಲಿ ಬಿಜೆಪಿ ಹೇಗೆ ಅಧಿಕಾರ ಹಿಡಿದಿದೆ ಎಂದು ನಮಗೆ ಗೊತ್ತಿದೆ. ಕರ್ನಾಟಕದಲ್ಲಿ ಆಪರೇಷನ್ ಕಮಲದ ಮೂಲಕ ದೇಶಕ್ಕೆ ಹೊಸ ರಾಜಕೀಯ ಪಿಡುಗನ್ನು ಪರಿಚಯಿಸಿದವರಿಂದ ಕಾಂಗ್ರೆಸ್ ನವರು ಪಾಠ ಕಲಿಯಬೇಕಿಲ್ಲ ಎಂದು ತಿರುಗೇಟು ನೀಡಿದರು.

# ಶಾಸಕ ರಾಯರೆಡ್ಡಿಗೆ ಸಚಿವ ಸ್ಥಾನ ; ವಿಠ್ಠಲರಾವ್ ದೇಸಾಯಿ ಒತ್ತಾಯ

ಅ.ಶ. ಸುದ್ದಿ ಕುಕನೂರು

**ಕುಕನೂರು: ಮುಖ್ಯಮಂತ್ರಿ ಡಿ. ಕೆ ಶಿವಕುಮಾರ್ ಅವರ ನೇತೃತ್ವದಲ್ಲಿ ರಚನೆಯಾಗಲಿರುವ ಎರಡನೇ ಹಂತದ ಸಚಿವ ಸಂಪುಟದಲ್ಲಿ ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿಯವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕುಕನೂರು ತಾಲೂಕ ಕೆಪಿಸಿಸಿ ಪ್ರಚಾರ ಸಮಿತಿ ಸದಸ್ಯ ವಿಠ್ಠಲರಾವ್ ದೇಸಾಯಿ ಒತ್ತಾಯಿಸಿದ್ದಾರೆ.**

ಅವರು ಈ ಕುರಿತು ಪಟ್ಟಣದಲ್ಲಿ ಮಾಧ್ಯಮದೊಂದಿಗೆ ಮಾತನಾಡಿ ನೂತನ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರ ಎರಡನೇ ಹಂತದ ಸಚಿವ ಸಂಪುಟದಲ್ಲಿ ಶಾಸಕ ಬಸವರಾಜ ರಾಯರೆಡ್ಡಿ ಅವರಿಗೆ ಮಂತ್ರಿ ಸ್ಥಾನ ನೀಡಿದರೆ ರಾಜ್ಯಕ್ಕೆ ಉತ್ತಮ ಆಡಳಿತ ನೀಡುವಲ್ಲಿ ಶಾಸಕ ರಾಯರೆಡ್ಡಿ ಅವರು ಕಾರ್ಯ ನಿರ್ವಹಿಸುತ್ತಾರೆ. ಇವರನ್ನು ಅಭಿವೃದ್ಧಿ ಕೂಟದಡಿ ಪರಿಗಣಿಸಿ ಸಚಿವ ಸ್ಥಾನ ಕೊಡಬೇಕು ಎಂದರು. 1985ರಿಂದ ಇಲ್ಲಿವರೆಗೂ ಒಟ್ಟು ಆರು ಬಾರಿ ಶಾಸಕರಾಗಿ ಒಮ್ಮೆ ಸಂಸದರಾಗಿ, ದೆಹಲಿ ವಿಶೇಷ ಪ್ರತಿನಿಧಿಯಾಗಿ, ಸರ್ಕಾರದ ಪಕ್ಷದ ವಿವಿಧ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ,



ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರ್ಕಾರದಲ್ಲಿ ಸಿಎಂ ಆರ್ಥಿಕ ಸಲಹೆಗಾರರಾಗಿ ಸರ್ಕಾರಕ್ಕೆ ಸಾಕಷ್ಟು ಉತ್ತಮ ಆಡಳಿತ ನಡೆಸುವಲ್ಲಿ ಮಾನ್ಯ ಶಾಸಕರ ಸಲಹೆ ನಿಜಕ್ಕೂ ಸ್ಮರಣೀಯ, ಇಂತಹ ಅನುಭವಿ, ಆಡಳಿತಗಾರ ವ್ಯಕ್ತಿಗೆ ಸಚಿವ ಸ್ಥಾನ ಕೊಟ್ಟಾಗ ಸಮರ್ಥವಾಗಿ ನಿಭಾಯಿಸಲಿದ್ದಾರೆ. ವಸತಿ ಹಾಗೂ ಉನ್ನತ ಶಿಕ್ಷಣ ಸಚಿವರಾಗಿ ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದಾರೆ. ಇಡೀ ಯಲಬುರ್ಗಾ ಕ್ಷೇತ್ರವನ್ನು ರಾಜ್ಯವೇ ನೋಡುವಂತೆ ಬಹುದೊಡ್ಡ ಮಟ್ಟದಲ್ಲಿ ಅಭಿವೃದ್ಧಿ ಕ್ರಾಂತಿಯನ್ನು ಮಾಡಿದ್ದಾರೆ ಎಂದರು.

ರೈಲ್ವೆ, ಶಿಕ್ಷಣ, ಹೆದ್ದಾರಿ, ಕೆರೆ ತುಂಬಿಸುವ ಯೋಜನೆ ಮಹತ್ವದ ಕೆಲಸಗಳನ್ನು ಸಹ ಇವರು ಮಾಡಿದ್ದಾರೆ. ಸ್ವತಃ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರೇ ರಾಯರೆಡ್ಡಿ ಅವರಷ್ಟು ಅಭಿವೃದ್ಧಿ ಕೆಲಸ ನಮ್ಮ ಕ್ಷೇತ್ರದಲ್ಲಿ ಆಗಿಲ್ಲಾ ಎಂದು ಕೊಂಡಾಡಿದ್ದಾರೆ. ರಾಯರಡ್ಡಿಯನ್ನು ಯಾರು ಮೀರಿಸಲಾಗದು ಎಂದು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹೇಳಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರೆಂಟಿ ಯೋಜನೆ ಯಶಸ್ವಿಗೊಳ್ಳಬೇಕಾದರೆ ರಾಯರೆಡ್ಡಿಯವರು ಪಾತ್ರ ಬಹುದೊಡ್ಡದು, ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಆಡಳಿತ ಮಾಡುತ್ತಿರುವ ರಾಯರೆಡ್ಡಿಯವರಿಗೆ ಮಂತ್ರಿ ಸ್ಥಾನದ ಅವಕಾಶ ಕಲ್ಪಿಸಬೇಕು ಎಂದರು. ರಾಜ್ಯದ 224 ಶಾಸಕರಲ್ಲಿ ರಾಯರೆಡ್ಡಿಯವರು ಬುದ್ಧಿವಂತ ಶಾಸಕರಾಗಿದ್ದಾರೆ. ಒಟ್ಟಾರೆ ನಮ್ಮ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ವಿಠ್ಠಲರಾವ್ ಹನುಮಂತರಾವ್ ದೇಸಾಯಿ ಮನವಿ ಮಾಡಿದ್ದಾರೆ.

# ವಣಗೇರಿ :4ನೇ ಅಂಗನವಾಡಿ ಕೇಂದ್ರ ಉದ್ಘಾಟನೆ

## ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಿ : ಸಿಡಿಪಿಒ

ಅ.ಶ. ಸುದ್ದಿ ಕುಕನೂರು

**ಕುಕನೂರು: ಸರಕಾರ ಅಂಗನವಾಡಿ ಕೇಂದ್ರಗಳಿಗೆ ನೀಡುವ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ಹಾಗೂ ಗರ್ಭಿಣಿ ಮಹಿಳೆಯರಿಗೆ ನೀಡುವ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡವಲ್ಲಿ ಪ್ರತಿಯೊಂದು ಅಂಗನವಾಡಿ ಕೇಂದ್ರಗಳ ಕರ್ತವ್ಯ ಮಹತ್ವದ್ದಾಗಿದೆ ಎಂದು ಯಲಬುರ್ಗಾ ತಾಲ್ಲೂಕ ಶಿಶು ಯೋಜನಾಭಿವೃದ್ಧಿ ಅಧಿಕಾರಿ ಬೇಟದೇಶ ಮಾಳೆಕೊಪ್ಪ ಹೇಳಿದರು.**



ಅವರು ತಾಲ್ಲೂಕಿನ ವಣಗೇರಿ ಗ್ರಾಮದ 4ನೇ ಅಂಗನವಾಡಿ ಕೇಂದ್ರ ಉದ್ಘಾಟನೆ ಕಾರ್ಯಕ್ರಮ ನೆರವೇರಿಸಿ ಮಾತನಾಡಿ ಅಂಗನವಾಡಿ ಕೇಂದ್ರಗಳು ಮಕ್ಕಳಿಗೆ ಉತ್ತಮ ಪರಿಸರದ ಜೊತೆಗೆ ಕಲಿಕೆಯ ಮೊದಲ ಹಂತದ ಭದ್ರ ಬುನಾದಿಯಾಗಿದ್ದು, ಅಂಗನವಾಡಿ ಶಿಕ್ಷಕಿಯರು ಮಕ್ಕಳಿಗೆ ಕಲಿಕಾ ಪೂರಕ ಪರಿಸರ ನಿರ್ಮಿಸಬೇಕು ಎಂದು ಕರೆ ನೀಡಿದರು. ತಾಲ್ಲೂಕಿನ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದು, ಅಂಗನವಾಡಿ ಕೇಂದ್ರಗಳಿಗೆ ಬೇಕಿರುವ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುವುದು.

ಶಾಸಕರು ನಮ್ಮ ಇಲಾಖೆಯ ಬಗ್ಗೆ ಬಹಳ ಕಾಳಜಿ ಹೊಂದಿದ್ದು ಯಾವುದೇ ಕುಂದು ಕೊರತೆಗಳಿದ್ದಲ್ಲಿ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಅಜ್ಜಯ್ಯ ಹಿರೇಮಠ, ಶಾಂತಯ್ಯ ಹಿರೇಮಠ, ಹನುಮಂತಪ್ಪ, ಆಂಜನೇಯ, ಅಂಗನವಾಡಿ ಮೇಲ್ವಿಚಾರಕಿ ಲಲಿತಾ ನಾಯಕ, ಸುಮಾ ಕರಿಗಾರ ಪದ್ಮಾವತಿ ದೊಡ್ಡಮನಿ ಗಿರಿಜಾ ಸೇರಿದಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗಳು, ಗ್ರಾಮದ ಮುಖಂಡರು, ಹಿರಿಯರು, ಮಹಿಳೆಯರು ಹಾಜರಿದ್ದರು.

# ಪ್ಲಾಸ್ಟಿಕ್ ನಿಷೇಧಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗೆ ಮನವಿ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲೆಯಾದ್ಯಂತ ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದ ಸರ್ಕಾರದ ಈ ಆದೇಶಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಆಗ್ರಹಿಸಿ ಜನಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ಶನಿವಾರ ಜಿಲ್ಲಾಧಿಕಾರಿ ಡಾ.ಸುರೇಶ್ ಬಿ.ಇಟ್ನಾಳ ಅವರ ಅನುಪಸ್ಥಿತಿಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ಮನವಿ ಸಲ್ಲಿಸಿದರು.**



ಮನವಿಯಲ್ಲಿ ಜನಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ನಮ್ಮ ಜಿಲ್ಲೆಯ ಪರಿಸರ ಮತ್ತು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ನಿಯಮಾವಳಿಗಳು ಆಹಾರ ಪ್ಯಾಕಿಂಗ್‌ಗೆ ಇಷ್ಟೆಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಠಿಣ ನಿಷೇಧಾಜ್ಞೆಯ ಹೊರತಾಗಿಯೂ, ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳಾದ ಕ್ಯಾರಿ ಬ್ಯಾಗ್, ಪ್ಲಾಸ್ಟಿಕ್ ಕಪ್, ಗ್ಲಾಸ್, ಪ್ಲೇಟ್ ಹಾಗೂ ಸ್ಟ್ರಾಗಳ ಬಳಕೆ ಮಿತಿಮೀರಿದೆ. ಅತ್ಯಂತ ಆತಂಕಕಾರಿ ವಿಷಯವೆಂದರೆ, ಸಾರ್ವಜನಿಕ ಸ್ಥಳಗಳು ಮಾತ್ರವಲ್ಲದೆ ಜಿಲ್ಲಾಡಳಿತದ ಸಭಾಂಗಣ. ಜಿಲ್ಲಾ ಪಂಚಾಯತಿಯ ಜೆ.ಹೆಚ್.ಪಟೇಲ್ ಸಭಾಂಗಣ ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳ ಸಭೆ-ಸಮಾರಂಭಗಳಲ್ಲೂ ಇವುಗಳ ಬಳಕೆ ಎದ್ದುಕಾಣುತ್ತಿರುವುದು ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ.

ಈ ಹಿನ್ನೆಲೆಯಲ್ಲಿ, ಜಿಲ್ಲೆಯಲ್ಲಿ ಎದುರಾಗುತ್ತಿರುವ ಪ್ರಮುಖ ಕಾನೂನಾತ್ಮಕ ಅಂಶಗಳು ಮತ್ತು ಗಂಭೀರ ಸಮಸ್ಯೆಗಳನ್ನು ತಮ್ಮ ಆಡಳಿತಾತ್ಮಕ ಕ್ರಮ ಕೈಗೊಳ್ಳಬೇಕು.

2021ರ ಪ್ರಕಾರ, ಜುಲೈ 1, 2022 ರಿಂದಲೇ ಜಾರಿಗೆ ಬರುವಂತೆ ದೇಶದಾದ್ಯಂತ ಏಕಬಳಕೆಯ ಪ್ಲಾಸ್ಟಿಕ್ ಉತ್ಪಾದನೆ, ದಾಸ್ತಾನು ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದರೆ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಗ್ರಾಮ ಪಂಚಾಯತ್ ನಿರಂತರ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪದಿಂದಾಗಿ ಜಿಲ್ಲೆಯಲ್ಲಿ ಈ ಆದೇಶಗಳು ಕಾಗದದ ಮೇಲಷ್ಟೇ ಉಳಿದಿವೆ. ಇದರಿಂದ ಜ್ವಲಂತ ಸಮಸ್ಯೆಗಳು ಎದುರಾಗುತ್ತಿದ್ದು, ಪರಿಸರ ಮತ್ತು ಅಂತರ್ಜಲ ಮಾಲಿನ್ಯ: ಪ್ಲಾಸ್ಟಿಕ್ ತ್ಯಾಜ್ಯಗಳು ಮಣ್ಣಿನಲ್ಲಿ ಕರಗಲು ನೂರಾರು ವರ್ಷ ಬೇಕಾಗುವುದರಿಂದ ಭೂಮಿಯ ಫಲವತ್ತತೆ ನಾಶವಾಗುತ್ತಿದ್ದು, ಅಂತರ್ಜಲ ಮರುಪೂರಣ ಪ್ರಕ್ರಿಯೆ ಕುಂಠಿತಗೊಳ್ಳುತ್ತಿದೆ.

ಪ್ಲಾಸ್ಟಿಕ್ ತ್ಯಾಜ್ಯವನ್ನು ಚರಂಡಿಗೆ ಎಸೆಯುವುದರಿಂದ, ಚರಂಡಿಯು ಬ್ಲಾಕ್ ಆಗಿ ನೀರು ಸರಾಗವಾಗಿ ಹರಿಯದೆ ಸಾಂಕ್ರಾಮಿಕ ರೋಗಗಳು ಹರಡುತ್ತವೆ.ಇದು ಡೆಂಗ್ಯೂ, ಮಲೇರಿಯಾದಂತಹ ಮಾರಕ ಸಾಂಕ್ರಾಮಿಕ ರೋಗಗಳು ಹರಡಲು ಪ್ರಮುಖ ಆವಾಸಸ್ಥಾನವಾಗಿದೆ. ಜಾನುವಾರುಗಳ ಮಾರಣಹೋಮ, ಆರೋಗ್ಯದ ಮೇಲಿನ ಮಾರಕ ಪರಿಣಾಮ, ಬಿಸಿ ಬಿಸಿ ಚಹಾ,ಕಾಫಿ. ಹಾಲು ಅಥವಾ ಆಹಾರವನ್ನು ಪ್ಲಾಸ್ಟಿಕ್ ಕಪ್, ಪ್ಲೇಟ್‌ಗಳಲ್ಲಿ ಸೇವಿಸುವುದರಿಂದ ರಾಸಾಯನಿಕಗಳು ಆಹಾರದೊಂದಿಗೆ ಸೇರಿ ಮಾರಕ ಕಾಯಿಲೆಗಳಿಗೆ ದಾರಿಯಾಗುತ್ತದೆ. ಆಹಾರ ಸುರಕ್ಷತೆಯ ಉಲ್ಲಂಘನೆ, ಬೀದಿ ಬದಿ ಅಂಗಡಿಗಳಲ್ಲಿ ಬಜ್ಜಿ, ಬೋಂಡಾ, ಚುರುಮುರಿ ಸೇರಿದಂತೆ ಬಹುತೇಕ ತಿನಿಸುಗಳನ್ನು ದಿನಪತ್ರಿಕೆಗಳ ಹಾಳೆಯ ಪೊಟ್ಟಣಗಳಲ್ಲಿ ನೀಡಲಾಗುತ್ತಿದೆ. ದಿನಪತ್ರಿಕೆಯ ಶಾಯಿ ಅತ್ಯಂತ ವಿಷಕಾರಿಯಾಗಿದ್ದು, ಇದು ಆಹಾರದ ಜೊತೆ ಸೇರಿ ಸಾರ್ವಜನಿಕರ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿದೆ. ಇದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ.

ಜಿಲ್ಲಾಡಳಿತವು ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಮುಂಬರುವ ಪೀಳಿಗೆಯ ಆರೋಗ್ಯ ಮತ್ತು ಪರಿಸರ ಸಂರಕ್ಷಣೆಗಾಗಿ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಆಶಿಸುತ್ತೇವೆ ಎಂದು ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್.ಪ್ರಗತಿಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಮುಖ್ಯ ಸಂಚಾಲಕ ಬಸವರಾಜ್ ಶೀಲವಂತರ್.ಪಾಸ್ಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣ್ಣವರ್.ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ತುಕಾರಾಮ್ ಪಾತ್ರೋಟಿ. ಕೊಳಚೆ ನಿರ್ಮೂಲನಾ ವೇದಿಕೆಯ ಸಂಚಾಲಕ ಗಾಳೆಪ್ಪ ಮುಂಗೋಲಿ. ಸಂಘಟನೆಯ ಮುಖಂಡರಾದ ಮಖಬೂಲ್ ರಾಯಚೂರು. ಶಿವಪ್ಪ ಹಡಪದ್. ಆದಿತ್ಯ ಟಿ.ಪಾತ್ರೋಟಿ ಮುಂತಾದವರು ತಿಳಿಸಿದ್ದಾರೆ.

ಹೋಟೆಲ್ ಹಾಗೂ ಬೀದಿ ಬದಿ ಆಹಾರ ಮಾರಾಟಗಾರರು ದಿನಪತ್ರಿಕೆಗಳ ಹಾಳೆಯಿಂದ ಆಹಾರ ಪೊಟ್ಟಣ ಮಾಡುವುದನ್ನು ಆಹಾರ ಸುರಕ್ಷತಾ ಅಧಿಕಾರಿಗಳ ಮೂಲಕ ಕಡ್ಡಾಯವಾಗಿ ತಡೆಗಟ್ಟಬೇಕು, ಪರಿಸರ ಸ್ನೇಹಿ ಪರ್ಯಾಯ ವಸ್ತುಗಳಾದ ಅಡಿಕೆ ತಟ್ಟೆ, ಪ್ಲಾಸ್ಟಿಕ್ ಮುಕ್ತ ಶುದ್ಧ ಪೇಪರ್ ಕಪ್, ಬಿದಿರು ಮತ್ತು ಮಣ್ಣಿನ ಪಾತ್ರೆಗಳ. ಸ್ಟೀಲ್ ಗ್ಲಾಸ್ ಗಳ ಬಳಕೆಯನ್ನು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ಮೂಲಕ ಉತ್ತೇಜಿಸಿ, ಸ್ಥಳೀಯ ಉದ್ಯೋಗಾವಕಾಶಗಳಿಗೆ ಬೆಂಬಲ ನೀಡಬೇಕು. ಕೊಪ್ಪಳ ಜಿಲ್ಲೆ - ಪ್ಲಾಸ್ಟಿಕ್ ಮುಕ್ತ ಮತ್ತು ಮಾಲಿನ್ಯ ರಹಿತ ಮಾದರಿ ಜಿಲ್ಲೆ ಎಂಬ ವಿಶೇಷ ಅಭಿಯಾನಕ್ಕೆ ಚಾಲನೆ ನೀಡಿ, ಶಾಲಾ-ಕಾಲೇಜುಗಳ ಮತ್ತು ಧಾರ್ಮಿಕ ಕೇಂದ್ರಗಳ ಮೂಲಕ ವ್ಯಾಪಕ ಜಾಗೃತಿ ಮೂಡಿಸಬೇಕು.

### ಪ್ರಮುಖ ಒತ್ತಾಯಗಳು

**ಜಿಲ್ಲಾ ದಂಡಾಧಿಕಾರಿಗಳ ಸರ್ವೋಚ್ಚ ಅಧಿಕಾರವನ್ನು ಬಳಸಿ, ಈ ಕೂಡಲೇ ಕೆಳಗಿನ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಕಟ್ಟುನಿಟ್ಟಿನ ಸುತ್ತೋಲೆ, ವಿಶೇಷ ಕಾರ್ಯಪಡೆ ರಚನೆ ಮಾಡಬೇಕು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಗ್ರಾಮ ಪಂಚಾಯತ್, ಪೊಲೀಸ್ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳ ಜಂಟಿ ವಿಶೇಷ ತಂಡಗಳನ್ನು ರಚಿಸಿ,ಪ್ಲಾಸ್ಟಿಕ್ ದಾಸ್ತಾನು ಮಾಡುವ ಸಗಟು ವ್ಯಾಪಾರಿಗಳ ಮೇಲೆ ಆಕಸ್ಮಿಕ ದಾಳಿ ನಡೆಸಿ, ಭಾರಿ ದಂಡ ವಿಧಿಸುವುದರ ಜೊತೆಗೆ ಅವರ ಪರವಾನಗಿಯನ್ನು ರದ್ದುಪಡಿಸಿ ಕಠಿಣ ದಂಡ ಸೇರಿದಂತೆ ಕಾನೂನಾತ್ಮಕ ಕ್ರಮ ಕೈಗೊಳ್ಳಬೇಕು.**

# ಲೇಖಕರ ದಿನಚರಿ...


## ಆರೋಗ್ಯದ ಬೆಳವಣಿಗೆಗೆ 'ಯೋಗ' ಮದ್ದು

ಯೋಗ ಎಂಬುದು ಕೇವಲ ದೈಹಿಕ ಕಸರತ್ತಲ್ಲ ಅದು ದೇಹ, ಮನಸ್ಸು ಮತ್ತು ಆತ್ಮವನ್ನು ಬೆಸೆಯುವ ಒಂದು ಪವಿತ್ರ ಸೇತುವೆ. ಇಂದಿನ ಜಗತ್ತಿನಲ್ಲಿ ನಾವು ಎಲ್ಲವನ್ನೂ ಗೆಲ್ಲಲು ಓಡುತ್ತಿದ್ದೇವೆ ಆದರೆ ನಮ್ಮನ್ನು ನಾವೇ ಕಳೆದುಕೊಳ್ಳುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಮ್ಮನ್ನು ನಾವು ಮರಳಿ ಕಂಡುಕೊಳ್ಳಲು ಇರುವ ಏಕೈಕ ದಾರಿ ಯೋಗ.

ಯೋಗವು ಒಂದು ಧರ್ಮಕ್ಕೆ ಅಥವಾ ಜಾತಿಗೆ ಸೀಮಿತವಾದುದಲ್ಲ. ಅದು ಪ್ರಕೃತಿ ನಮಗೆ ನೀಡಿದ ಅಮೂಲ್ಯ ಕೊಡುಗೆ. ನಿಮ್ಮ ದಿನದ ಕೆಲವೇ ನಿಮಿಷಗಳನ್ನು ಯೋಗಕ್ಕೆ ಮೀಸಲಿಡಿ. ಅದು ನಿಮ್ಮ ಜೀವನದ ದೃಷ್ಟಿಕೋನವನ್ನೇ ಬದಲಾಯಿಸುತ್ತದೆ. ನಿಮ್ಮೊಳಗೆ ಕತ್ತಲಿದ್ದರೆ ಯೋಗವು ಜ್ಞಾನದ ದೀಪವಾಗಿ ನಿಮ್ಮನ್ನು ಮುನ್ನಡೆಸುತ್ತದೆ. ಯೋಗವು ಕಣ್ಣಿಗೆ ಕಾಣದ ಮನಸ್ಸಿಗೆ ಶಕ್ತಿಯನ್ನು ನೀಡುತ್ತದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಮನುಷ್ಯನಿಗೆ ದೈಹಿಕ ಆಯಾಸಕ್ಕಿಂತ ಮಾನಸಿಕ ಆಯಾಸವೇ ಹೆಚ್ಚಾಗಿದೆ. ಖಿನ್ನತೆ ಆತಂಕ ಮತ್ತು ಅನಿಶ್ಚಿತತೆಗಳು ನಮ್ಮನ್ನು ಕಾಡುತ್ತಿವೆ.

ಇಂತಹ ಸಮಯದಲ್ಲಿ ಯೋಗವು ಒಂದು ತಾಯಿಯ ಮಡಿಲಿನಂತೆ ಆಶ್ರಯ ನೀಡುತ್ತದೆ. ಧ್ಯಾನ ಮತ್ತು ಪ್ರಾಣಾಯಾಮಗಳು ಚಂಚಲವಾದ ಮನಸ್ಸನ್ನು ಶಾಂತಗೊಳಿಸುತ್ತವೆ. ಮನಸ್ಸು ಪ್ರಶಾಂತವಾದಾಗ ನಮಗೆ ನಮ್ಮ ಜೀವನದ ಸ್ಪಷ್ಟ ಚಿತ್ರಣ ಸಿಗುತ್ತದೆ. ಕಷ್ಟಗಳನ್ನು ಎದುರಿಸುವ ಧೈರ್ಯ ಬರುತ್ತದೆ. ಯೋಗವು ನಮಗೆ ಪರಿಸ್ಥಿತಿಗಳನ್ನು ಬದಲಾಯಿಸುವುದನ್ನು ಕಲಿಸುವುದಿಲ್ಲ ಬದಲಿಗೆ ಯಾವುದೇ ಪರಿಸ್ಥಿತಿಯಲ್ಲೂ ಧೃತಿಗೆಡದೆ ಸ್ಥಿತಪ್ರಜ್ಞರಾಗಿರುವುದನ್ನು ಕಲಿಸುತ್ತದೆ. ನಿಮ್ಮ ಜೀವನದಲ್ಲಿ ಎಷ್ಟೇ ಕತ್ತಲೆಯಿದ್ದರೂ ಯೋಗ ಎಂಬ ಜ್ಯೋತಿಯನ್ನು ಹಚ್ಚಿನೋಡಿ. ಅದು ನಿಮ್ಮೊಳಗಿನ ಶಕ್ತಿಯನ್ನು ನಿಮಗೇ ದರ್ಶನ ಮಾಡಿಸುತ್ತದೆ.

ವಯಸ್ಸು ಲಿಂಗ ಅಥವಾ ಶಾರೀರಿಕ ಮಿತಿಗಳು ಯೋಗಕ್ಕೆ ಎಂದಿಗೂ ಅಡ್ಡಿಯಾಗಲಾರವು. ಬೇಕಾಗಿರುವುದು ಕೇವಲ ಒಂದೇ ಒಂದು ದೃಢ ಸಂಕಲ್ಪ. ಯೋಗವು ಕೇವಲ ದೈಹಿಕ ಆರೋಗ್ಯಕ್ಕೆ ಮಾತ್ರ ಸೀಮಿತವಾಗಿಲ್ಲ, ಅದು ಆತ್ಮದ ಉದ್ಧಾರಕ್ಕೆ ಇರುವ ರಾಜಮಾರ್ಗ.



ಇಂದಿನಿಂದಲೇ ಯೋಗವನ್ನು ನಮ್ಮ ಜೀವನದ ಒಂದು ಭಾಗವಾಗಿಸಿಕೊಳ್ಳೋಣ. ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಕೇವಲ ಅರ್ಧ ಗಂಟೆಯನ್ನು ನಮಗಾಗಿ ನಮ್ಮ ಆತ್ಮದ ಸೌಂದರ್ಯಕ್ಕಾಗಿ ಮೀಸಲಿಡೋಣ. ಯೋಗದ ಬೆಳಕಿನಲ್ಲಿ ನಮ್ಮೊಳಗಿನ ಕತ್ತಲೆಯನ್ನು ಓಡಿಸಿ ಆರೋಗ್ಯವಂತ, ಆನಂದಮಯ ಮತ್ತು ಪ್ರೇರಣಾದಾಯಕ ಸಮಾಜವನ್ನು ನಿರ್ಮಿಸೋಣ. ಯೋಗವೇ ನಮ್ಮ ಬದುಕಿನ ನಿಜವಾದ ಉಸಿರಾಗಲಿ.

ಆರೋಗ್ಯವೇ ಭಾಗ್ಯ ಎಂಬ ಮಾತಿದೆ. ಆ ಭಾಗ್ಯವನ್ನು ಕರುಣಿಸುವ ಶಕ್ತಿ ಯೋಗಕ್ಕಿದೆ. ಯೋಗ ಮಾಡಲು ವಯಸ್ಸಿನ ಮಿತಿ ಇಲ್ಲ, ಜಿಮ್‌ನಂತೆ ದುಬಾರಿ ಉಪಕರಣಗಳ ಅಗತ್ಯವೂ ಇಲ್ಲ. ನಿಮಗೆ ಬೇಕಾಗಿರುವುದು ಕೇವಲ ಒಂದು ಯೋಗ ಮ್ಯಾಟ್ ಮತ್ತು ದೃಢ ಸಂಕಲ್ಪ ಮಾತ್ರ. ದಿನದ 24 ಗಂಟೆಗಳಲ್ಲಿ ಕೇವಲ 30 ನಿಮಿಷಗಳನ್ನು ನಿಮಗಾಗಿ ಮುಡುಪಾಗಿಡಿ. ಯೋಗವನ್ನು ಕೇವಲ ಅಭ್ಯಾಸವನ್ನಾಗಿ ಮಾಡಿಕೊಳ್ಳದೆ, ನಿಮ್ಮ ಜೀವನಶೈಲಿಯನ್ನಾಗಿ ಮಾಡಿಕೊಳ್ಳಿ. ನಿಮ್ಮ ಒಳಗಿನ ಹೊಸ ಚೈತನ್ಯವನ್ನು ಅನ್ವೇಷಿಸಿ, ಆರೋಗ್ಯಕರ ಹಾಗೂ ಸಂತೋಷದಾಯಕ ಜೀವನ ನಡೆಸಿ.

ಪ್ರತಿ ವರ್ಷ ಜೂನ್ 21ರಂದು ನಾವು ವಿಶ್ವ ಯೋಗ ದಿನವನ್ನು ಅತ್ಯಂತ ಉತ್ಸಾಹದಿಂದ ಆಚರಿಸುತ್ತೇವೆ. ಸಾಮಾಜಿಕ ಜಾಲತಾಣಗಳಲ್ಲಿ ಯೋಗದ ಚಿತ್ರಗಳನ್ನು ಹಂಚಿಕೊಳ್ಳುತ್ತೇವೆ ಸಾಮೂಹಿಕ ಯೋಗ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇವೆ. ಆದರೆ ಯೋಗ ಎಂಬುದು ಕೇವಲ ಒಂದು ದಿನದ ಆಚರಣೆಯಾಗಬಾರದು. ಅದು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಬೇಕು. ಯೋಗ ದಿನವು ನಮಗೆ ಕೇವಲ ಒಂದು ನೆನಪೋಲೆ ಮಾತ್ರ ನಿಜವಾದ ಯೋಗದ ಲಾಭ ಸಿಗುವುದು ಅದನ್ನು ಪ್ರತಿದಿನವೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ.

ಯೋಗ ಮಾಡಿದರೆ ರೋಗವಿಲ್ಲ ಎಂಬುದು ಕೇವಲ ಒಂದು ಜನಪ್ರಿಯ ಗಾದೆಯಲ್ಲ. ಅದು ಶತಶತಮಾನಗಳ ಅನುಭವದಿಂದ ಮೂಡಿಬಂದ ಪರಮ ಸತ್ಯ.


ಇಂದಿನ ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನ ಬೆಳೆದಂತೆ ಮಾನವನ ದೈಹಿಕ ಶ್ರಮ ಕಡಿಮೆಯಾಗಿದೆ. ಮಾನಸಿಕ ಒತ್ತಡ ಹೆಚ್ಚಾಗಿದೆ. ಇದರ ಪರಿಣಾಮವಾಗಿ ಹಲವಾರು ಕಾಯಿಲೆಗಳು ನಮ್ಮನ್ನು ಕಾಡುತ್ತಿವೆ. ಈ ಎಲ್ಲಾ ಜಾಗತಿಕ ಆರೋಗ್ಯ ಸಮಸ್ಯೆಗಳಿಗೆ ಅತ್ಯಂತ ಸರಳ ಮತ್ತು ಶಾಶ್ವತ ಪರಿಹಾರವೆಂದರೆ ಅದುವೇ ಯೋಗ. ನೆಮ್ಮದಿ ಎಂಬುದು ಹೊರಗಿನ ಜಗತ್ತಿನಲ್ಲಿ ಸಿಗುವ ವಸ್ತುವಲ್ಲ ಅದು ನಮ್ಮೊಳಗೇ ಇರುವ ಸ್ಥಿತಿ. ಯೋಗವು ಆ ಆಂತರಿಕ ನೆಮ್ಮದಿಯನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ. ಯಾವುದೇ ವಯಸ್ಸಿನವರಾದರೂ ಯೋಗವನ್ನು ತಮ್ಮ ದಿನಚರಿಯ ಭಾಗವಾಗಿಸಿಕೊಳ್ಳಬಹುದು. ಹಣದಿಂದ ಕೊಳ್ಳಲಾಗದ ನೆಮ್ಮದಿಯನ್ನು ಯೋಗದ ಮೂಲಕ ಉಚಿತವಾಗಿ ಪಡೆಯಬಹುದು.

ಆದ್ದರಿಂದ, ನೆಮ್ಮದಿಯ ಜೀವನಕ್ಕೆ ಮಾಡಬೇಕು ಯೋಗ ಎಂಬ ಮಾತನ್ನು ಅರಿತು, ನಾವೆಲ್ಲರೂ ಇಂದಿನಿಂದಲೇ ಯೋಗಾಭ್ಯಾಸವನ್ನು ಪ್ರೀತಿಯಿಂದ ರೂಢಿಸಿಕೊಳ್ಳೋಣ. ಜಗತ್ತಿನಲ್ಲಿ ಎಷ್ಟೋ ತರಹದ ವ್ಯಾಯಾಮಗಳು ಜೀವನಶೈಲಿಗಳು ಬಂದು ಹೋಗಬಹುದು. ಆದರೆ, ಶತಶತಮಾನಗಳಿಂದಲೂ ಮಾನವನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಯ್ದು ಬಂದಿರುವ ಏಕೈಕ ದಿವ್ಯೌಷಧ ಎಂದರೆ ಅದು ಯೋಗ. ಯೋಗ ಚೆನ್ನಾಗಿದೆ, ಮತ್ತೊಂದಿಲ್ಲ ಎಂಬ ಮಾತು ಕೇವಲ ಹೊಗಳಿಕೆಯಲ್ಲ ಅದು ಅನುಭವಿಸಿದ ಪ್ರತಿಯೊಬ್ಬರೂ ಒಪ್ಪುವ ಪರಮ ಸತ್ಯ.



ಕು.ಜ್ಯೋತಿ ಆನಂದ
ಚಂದುಕರ, ಬಾಗಲಕೋಟ.

## ಗಜಲ್



ಹೊಲದ ಸಾಲುಗಳ ನಡುವೆ ಅಪ್ಪನ ಬೆವರ ಹನಿಗಳಿವೆ
ಕಟ್ಟಿದ ಮಹಲಿನ ಕಲ್ಲಗಳ ಮೇಲೆ ಹಸ್ತದಗುರುತುಗಳಿವೆ

ಹೊರಟ ದಾರಿಯಲೀಗ ಒಂಟಿ ನೆರಳು ಹಿಂಬಾಲಿಸುತ್ತದೆ
ಹೆಜ್ಜೆ ಹೆಜ್ಜೆಗೂ ಅವನ ಕೈ ಹಿಡಿದು ನಡೆದ ಸೂಚನೆಗಳಿವೆ

ಸೂರ್ಯ ಚಂದ್ರರು ಆ ನೆನಹಿನ ಸುತ್ತ ಗಿರಕಿಯಾಡುತ್ತಾರೆ
ಇತಿಹಾಸದ ಪಠ್ಯದಲಿ ಸೇರಲಾಗದ ಚರಿತ್ರೆಯ ಪಾಠಗಳಿವೆ

ಅವನ ಎತ್ತಿನ ಗಾಣದಣ್ಣೆ ಬಸಿಯದೆ ದೇವಳಗಳು ಮಂಕು
ಬಸಿದ ಹನಿ ಹನಿ ಎಣ್ಣೆಯನುಂಡು ಬೆಳಕನಿತ್ತ ದೀಪಗಳಿವೆ

ಹರಕು ಚಾಪೆಯ ಮೇಲೆ ಮಲಗಿ ಬಾನ ಚುಕ್ಕೆ ಎಣಿಸುತ್ತಿದ್ದ
ಮಲಗಿದ ಅಂತಸ್ತಿನಲಿ ಕಾಂತಿಕಳೆದುಕೊಂಡ ಜ್ಯೋತಿಗಳಿವೆ

ಕೇಡೆಣಿಸಿದವರಿಗೆ ಸದಾ ಒಳಿತನ್ನೇ ಬಯಸಿದ ಯಜಮಾನ
ಹಾದಿಯ ಬದಿ ಹಚ್ಚಿದ ಗಿಡಗಳಲಿ ಆಸರೆ ಪಡೆದ ಹಕ್ಕಿಗಳಿವೆ

ಯಾವ ದೇವರಿಗೂ ಹೋಲಿಸಲಾಗದ ಕೃಷಿಕನಾತ ಜೋಗಿ
ಬತ್ತಿರುವ ಎದೆ ಎದೆಗಳಲೂ ಹಾಡು ಬಿತ್ತಿದ ನೆನಹುಗಳಿವೆ



ವೈ.ಎಂ.ಯಾಕೊಳ್ಳಿ

## ವಿಶ್ವಕ್ಕೆ ಭಾರತ ನೀಡಿದ ಅಮೂಲ್ಯ ಕೊಡುಗೆ: ಯೋಗ

**ಭಾರತೀಯ ಸಂಸ್ಕೃತಿ ಮತ್ತು ದರ್ಶನಶಾಸ್ತ್ರಗಳ ಸಾಗರದಲ್ಲಿ ಹುಟ್ಟಿದ ಅತ್ಯಂತ ಶ್ರೇಷ್ಠ ರತ್ನವೆಂದರೆ 'ಯೋಗ'. ಸಾವಿರಾರು ವರ್ಷಗಳ ಇತಿಹಾಸವಿರುವ ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ; ಅದು ದೇಹ, ಮನಸ್ಸು ಮತ್ತು ಆತ್ಮಗಳನ್ನು ಬೆಸೆಯುವ ಸಮಗ್ರ ವಿಜ್ಞಾನ. ಇಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಮೂಲಕ ಇಡೀ ವಿಶ್ವವೇ ಭಾರತದ ಈ ಪ್ರಾಚೀನ ಜ್ಞಾನದತ್ತ ಮುಖಮಾಡಿದೆ.**

ಯೋಗದ ಬೇರುಗಳು ಮತ್ತು ಇತಿಹಾಸ

ಯೋಗದ ಮೂಲ ಭಾರತದ ವೇದಗಳಲ್ಲಿ ಅಡಗಿದೆ. 'ಯೋಗ' ಎಂಬ ಪದವು ಸಂಸ್ಕೃತದ 'ಯುಜ್' ಧಾತುವಿನಿಂದ ಬಂದಿದೆ, ಇದರರ್ಥ 'ಸೇರಿಸುವುದು' ಅಥವಾ 'ಒಗ್ಗೂಡಿಸುವುದು'. ಆತ್ಮವನ್ನು ಪರಮಾತ್ಮನೊಂದಿಗೆ, ವೈಯಕ್ತಿಕ ಪ್ರಜ್ಞೆಯನ್ನು ವಿಶ್ವವ್ಯಾಪಿ ಪ್ರಜ್ಞೆಯೊಂದಿಗೆ ಬೆಸೆಯುವುದೇ ಇದರ ಗುರಿ. ಸಿಂಧೂ ಕಣಿವೆ ನಾಗರಿಕತೆಯ ಅವಶೇಷಗಳಲ್ಲಿ ದೊರೆತ ಮುದ್ರೆಗಳು ಯೋಗದ ಪ್ರಾಚೀನತೆಯನ್ನು ಸಾಬೀತುಪಡಿಸುತ್ತವೆ. ಮಹರ್ಷಿ ಪತಂಜಲಿಗಳು ಯೋಗ ಸೂತ್ರಗಳ ಮೂಲಕ ಇದನ್ನು ವ್ಯವಸ್ಥಿತವಾಗಿ ಕ್ರೋಢೀಕರಿಸಿದರು.

**ಸಮಗ್ರ ಆರೋಗ್ಯದ ಕೀಲಿಕೈ**

ಆಧುನಿಕ ವೈದ್ಯಕೀಯ ಜಗತ್ತು ಇಂದು ಜೀವನಶೈಲಿ ಕಾಯಿಲೆಗಳಾದ ಮಧುಮೇಹ, ರಕ್ತದೊತ್ತಡ ಮತ್ತು ಬೊಜ್ಜಿನ ವಿರುದ್ಧ ಹೋರಾಡುತ್ತಿದೆ. ಇಂತಹ ಸಂದರ್ಭದಲ್ಲಿ ಯೋಗವು ಒಂದು ಪರಿಪೂರ್ಣ ಚಿಕಿತ್ಸೆಯಾಗಿ ಹೊರಹೊಮ್ಮಿದೆ. ಯೋಗದ ಎಂಟು ಅಂಗಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ




ಮತ್ತು ಸಮಾಧಿಗಳು ಮನುಷ್ಯನನ್ನು ದೈಹಿಕವಾಗಿ ಸದೃಢಗೊಳಿಸುವುದಲ್ಲದೆ, ಮಾನಸಿಕವಾಗಿಯೂ ಸಮತೋಲನದಲ್ಲಿಡುತ್ತವೆ. ಆಸನಗಳು ದೇಹದ ನಮ್ಯತೆ, ಶಕ್ತಿ ಮತ್ತು ಅಂಗಾಂಗಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ. ಪ್ರಾಣಾಯಾಮ ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸಿ, ನರಮಂಡಲವನ್ನು ಶಾಂತಗೊಳಿಸುತ್ತದೆ. **ಧ್ಯಾನ ಏಕಾಗ್ರತೆಯನ್ನು ಹೆಚ್ಚಿಸಿ,** ಒತ್ತಡ ಮತ್ತು ಖಿನ್ನತೆಯಂತಹ ಮಾನಸಿಕ ಸಮಸ್ಯೆಗಳಿಗೆ ರಾಮಬಾಣವಾಗಿದೆ.

ಜಾಗತಿಕ ಅಂಗೀಕಾರ ಮತ್ತು ಭಾರತದ ಹೆಮ್ಮೆ

2014ರಲ್ಲಿ ಭಾರತದ ಪ್ರಧಾನ ಮಂತ್ರಿಗಳು ವಿಶ್ವಸಂಸ್ಥೆಯಲ್ಲಿ ಯೋಗದ ಮಹತ್ವವನ್ನು ಸಾರಿದಾಗ, ಕೇವಲ 90 ದಿನಗಳಲ್ಲಿ ವಿಶ್ವಸಂಸ್ಥೆಯು ಜೂನ್ 21 ಅನ್ನು 'ಅಂತರರಾಷ್ಟ್ರೀಯ ಯೋಗ ದಿನ' ಎಂದು ಘೋಷಿಸಿತು. ಇದು ಭಾರತದ ಇತಿಹಾಸದಲ್ಲಿ ಒಂದು ಸುವರ್ಣ ಅಧ್ಯಾಯ. ಇಂದು ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಿಂದ ಹಿಡಿದು ಪ್ಯಾರಿಸ್‌ನ ಬೀದಿಗಳವರೆಗೆ ಲಕ್ಷಾಂತರ ಜನರು ಯೋಗಾಭ್ಯಾಸ ಮಾಡುತ್ತಿರುವುದು ಭಾರತದ ಸಾಂಸ್ಕೃತಿಕ ಮೌಲ್ಯಗಳಿಗೆ ಜಗತ್ತು ನೀಡಿದ ಗೌರವವಾಗಿದೆ.


**ಯೋಗ: ಸುಸ್ಥಿರ ಜೀವನಶೈಲಿ**

ಯೋಗವು ಕೇವಲ ಚಾಪೆಯ ಮೇಲೆ ಮಾಡುವ ಕ್ರಿಯೆಯಲ್ಲ, ಅದು ಬದುಕಿನ ದರ್ಶನ. 'ಯೋಗಃ ಕರ್ಮಸು ಕೌಶಲಮ್' (ಕೆಲಸದಲ್ಲಿನ ಕುಶಲತೆಯೇ ಯೋಗ) ಎಂಬ ಶ್ರೀಕೃಷ್ಣನ ಮಾತು ಯೋಗವನ್ನು ದೈನಂದಿನ ಕೆಲಸ ಕಾರ್ಯಗಳಿಗೆ ಅನ್ವಯಿಸುತ್ತದೆ. ಪರಿಸರದೊಂದಿಗೆ ಬಾಂಧವ್ಯ, ಸಹಬಾಳ್ವೆ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಯೋಗ ಕಲಿಸುತ್ತದೆ. ಮಾನವಕುಲವು ಎದುರಿಸುತ್ತಿರುವ ಹವಾಮಾನ ಬದಲಾವಣೆ ಮತ್ತು ಸಾಂಕ್ರಾಮಿಕ ರೋಗಗಳಂತಹ ಸವಾಲುಗಳಿಗೆ 'ಹೋಲಿಸ್ಟಿಕ್ ಹೆಲ್ತ್' (ಸಮಗ್ರ ಆರೋಗ್ಯ) ನೀಡುವ ಯೋಗವೇ ಉತ್ತರ.

**ಸಮನ್ವಯದ ಸಂದೇಶ**

ಯೋಗವು ಧರ್ಮ, ಜಾತಿ, ಭಾಷೆ ಅಥವಾ ಗಡಿಗಳನ್ನು ಮೀರಿ ನಿಂತಿದೆ. ಇದು ಪ್ರತಿಯೊಬ್ಬರಿಗೂ ಮುಕ್ತವಾದ ಜ್ಞಾನಮಾರ್ಗ. ಭಾರತವು ವಿಶ್ವಕ್ಕೆ 'ವಸುಧೈವ ಕುಟುಂಬಕಂ' (ವಿಶ್ವವೇ ಒಂದು ಕುಟುಂಬ) ಎಂಬ ಸಂದೇಶವನ್ನು ನೀಡಿದೆ. ಯೋಗವು ಆ ಸಂದೇಶವನ್ನು ಪ್ರಾಯೋಗಿಕವಾಗಿ ಸಾಬೀತುಪಡಿಸುತ್ತಿದೆ. ಭೌತಿಕ ಸುಖದ ಹಿಂದೆ ಬೆನ್ನುಬಿದ್ದಿರುವ ಇಂದಿನ ಯುವಜನತೆಗೆ, ಶಾಂತಿ ಮತ್ತು ನೆಮ್ಮದಿಯ ನಿಜವಾದ ಮೂಲಗಳು ತಮ್ಮ ಒಳಗೇ ಇವೆ ಎಂಬುದನ್ನು ಯೋಗ ಮನವರಿಕೆ ಮಾಡಿಕೊಡುತ್ತದೆ.

ಯೋಗವು ಭಾರತದ ಮಣ್ಣಿನಲ್ಲಿ ಹುಟ್ಟಿ, ಇಂದು ವಿಶ್ವದ ಆಸ್ತಿಯಾಗಿದೆ. ಇದು ಕೇವಲ ಭಾರತದ ರಫ್ತಲ್ಲ, ಬದಲಾಗಿ ಮಾನವಕುಲಕ್ಕೆ ಭಾರತ ನೀಡಿದ ಶಾಶ್ವತ ಕೊಡುಗೆ. ನಾವು ಯೋಗವನ್ನು ಕೇವಲ ಒಂದು ದಿನದ ಆಚರಣೆಗೆ ಸೀಮಿತಗೊಳಿಸದೆ, ದೈನಂದಿನ ಬದುಕಿನ ಭಾಗವನ್ನಾಗಿ ಮಾಡಿಕೊಳ್ಳೋಣ. ಆರೋಗ್ಯಕರ ದೇಹ ಮತ್ತು ಪ್ರಶಾಂತ ಮನಸ್ಸಿನ ಮೂಲಕ ಸುಂದರ ಸಮಾಜವನ್ನು ನಿರ್ಮಿಸೋಣ. ಭಾರತದ ಈ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ನಮ್ಮೆಲ್ಲರ ಕರ್ತವ್ಯ. ಯೋಗದ ಅಭ್ಯಾಸವು ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವ ದಾರಿದೀಪವಾಗಲಿ. "ಯೋಗಃ ಚಿತ್ತವೃತ್ತಿ ನಿರೋಧಃ" ಎನ್ನುವಂತೆ, ಮನಸ್ಸಿನ ಚಂಚಲತೆಯನ್ನು ನಿಯಂತ್ರಿಸಿ ಆತ್ಮಸಾಕ್ಷಾತ್ಕಾರದತ್ತ ಸಾಗೋಣ.



ಶ್ರೇಯಸ್ ಕಾರ್ತಿಕ್

## ಅಣ್ಣಾ ಐ ಲವ್ ಯೂ

**ನಮ್ಮ ತಂದೆಯನ್ನು ನಾವು ಕರೆಯುತ್ತಿದ್ದುದು ಅಣ್ಣ ಎಂದು.ಅವರ ಬಗ್ಗೆ ಬರೆಯಬೇಕೆಂದರೆ ಏನು ಬರೆಯುವುದು. ಎಷ್ಟು ಬರೆದರೂ ಅದು ಸಾಗರದಲ್ಲಿನ ಬೊಗಸೆ ನೀರಿನಷ್ಟೇ.ಕಣ ಕಣದಲ್ಲೂ ಅಣು ಅಣುವಿನಲ್ಲೂ ಅವರದೇ ನೆನಪು ತುಂಬಿರುವಾಗ ಏನನ್ನಾದರೂ ಬರೆಯುತ್ತೇನೆ ಅಂದುಕೊಂಡರೆ ಅದು ಬರೀ ಕ್ಲೀಷೆಯಾಗಬಹುದೇನೋ ಎಂಬ ಭಯ. ಪ್ರತಿ ಹೆಣ್ಣು ಮಗುವಿಗೂ ಅವಳ ಅಪ್ಪನೇ ಬದುಕಿನ ಹೀರೋ ಎಂದರೆ ತಪ್ಪಾಗಲಾರದು.**

ನನಗೂ ಹಾಗೇ. ಚಿಕ್ಕಂದಿನಿಂದ ಅಪ್ಪ ಎಂಬ ಈ ಅದ್ಭುತ ನನ್ನ ಕಣ್ಣ ಮುಂದೆ ಮಾಯಾ ಲೋಕವನ್ನೇ ಬಿಚ್ಚಿಟ್ಟ ಮಾಂತ್ರಿಕ.ಅ ಆ ಇ ಈ ಂ ಃ ಅ ಆ ಯಿಂದ ಹಿಡಿದು ಬಾಳಿನೆಲ್ಲಾ ಗಹನ ವಿಷಯಗಳಿಗೆಲ್ಲಾ ಅವರೇ ನನ್ನ ಶಿಕ್ಷಕ?ಬೀಜಗಣಿತದಿಂದ ಹಿಡಿದು ಬೈರಪ್ಪರವರೆಗೂ?ಕುವೆಂಪು ರಾಮಾಯಣ ದರ್ಶನಂ ನಿಂದ ಹಿಡಿದು ಗುಲ್ಜಾರರ ಗಜಲ್ ವರೆಗಿನ ದಾರಿಯ ಮಾರ್ಗದರ್ಶಕ.ಜೀವನದ ಪ್ರತಿಯೊಂದು ವಿಷಯಗಳನ್ನು ಆಸ್ವಾದಿಸುತ್ತಿದ್ದ ಪರಿ?ಮತ್ತದೇ ಕಲೆಯನ್ನು ನಾವು ಮೂವರು ಜನ ಅಕ್ಕ ತಂಗಿಯರಲ್ಲೂ ಬೆಳೆಸಿದ ರೀತಿ ಅನನ್ಯ.

ಮೂರೂ ಹೆಣ್ಣೇ?ಎಂದು ಮೂಗು ಮುರಿದವರ ಮುಂದೆ ನನ್ನ ಮೂರೂ ಮಕ್ಕಳು ಮೂರು ಮುತ್ತುಗಳು ಎಂದು ಹೇಳಿ ಅಂತೇ ಬೆಳೆಸಿದ ಮಹಾನ್ ವ್ಯಕ್ತಿ ನನ್ನಪ್ಪ.ನನ್ನಲ್ಲಿನ ಸಾಹಿತ್ಯಾಸಕ್ತಿ ನನ್ನಪ್ಪನಿತ್ತ ವರವೇ. ಇಂದು ಅವರಿದ್ದಿದ್ದರೆ ಈ ಸಾಹಿತ್ಯಿಕ ಬಳಗಗಳಲ್ಲಿ ಮತ್ತು ಅಡುಗೆ ಗುಂಪುಗಳಲ್ಲಿ ಆಸಕ್ತಿ ವಹಿಸಿ ಹೆಚ್ಚಿನ ಮಟ್ಟದಲ್ಲಿ ಗುರುತಿಸಿ ಕೊಳ್ಳುತ್ತಿದ್ದರೇನೋ. ಪದಬಂಧಗಳನ್ನು ಬಿಡಿಸಲೆಂದೇ ಭಾನುವಾರದ ದಿನ ಹೆಚ್ಚಿನ ಪತ್ರಿಕೆಗಳನ್ನು ತರಿಸಿ ನಮ್ಮಲ್ಲಿ ಆ ಹುಚ್ಚನ್ನು ತುಂಬಿದರು. ಬದುಕಿನಲ್ಲಿ ಹಣವೊಂದೇ ಮುಖ್ಯವಲ್ಲ? ಸಂಬಂಧಗಳು ಮೌಲ್ಯಗಳು ಆದರ್ಶಗಳು ಮುಖ್ಯ ಎಂದು ನಂಬಿ? ನಡೆದು ನಮ್ಮಲ್ಲೂ



ಅದೇ ಮನೋಭಾವ ತುಂಬಿದರು.

ಇಂದು ಜೀವನದಲ್ಲಿ ನಾವೇನಾದರೂ ಯಶಸ್ಸು ಕಂಡಿದ್ದರೆ ಅದಕ್ಕೆಲ್ಲಾ ನನ್ನ ಅಪ್ಪ ಚಿಕ್ಕಂದಿನಲ್ಲಿ ಕಲಿಸಿದ ಪಾಠಗಳೇ ಕಾರಣ.ಇಂದಿನ ವ್ಯಕ್ತಿತ್ವ ವಿಕಸನ ಲೇಖನಗಳಲ್ಲಿ ಬರಹಗಳಲ್ಲಿ ಕಾಣಬರುವ ಎಷ್ಟೋ ವಿಷಯಗಳನ್ನು (ಉದಾಹರಣೆಗೆ think out of box concept) ನಮ್ಮಪ್ಪ ಚಿಕ್ಕಂದಿನಲ್ಲೇ ಹೇಳಿದ್ದ ನೆನಪು. ಇನ್ನು ಅವರ ನಳಪಾಕವಂತೂ ಮರೆಯಲೇ ಸಾಧ್ಯವಿಲ್ಲ. ಪ್ರೀತಿಯಿಂದ ನಮ್ಮಿಷ್ಟದ ತಿಂಡಿಗಳನ್ನು ಮಾಡಿಕೊಡುತ್ತಿದ್ದ ಮಮತೆ ಮರೆಯಲು ಸಾಧ್ಯವೇ?ಮಂಗಳೂರು ಬಜ್ಜಿಯಂತೂ ಅವರ signature dish ಆಗಿ ಆಪ್ತವಲಯದಲ್ಲೆಲ್ಲಾ ಪ್ರಖ್ಯಾತಿ ಹೊಂದಿತ್ತು.

ತುಂಬಾ ಸೂಕ್ಷ್ಮ ಸಂವೇದಿ ನನ್ನ ಅಣ್ಣ. ಹೆಂಗರಳು ಸಹ .ಅದಕ್ಕೆ ಪೂರಕವಾಗಿ ಈ ಸಂದರ್ಭಗಳನ್ನು ನೆನಪಿಸಿಕೊಳ್ಳಬೇಕು . ನಾನು ಐದಾರು ವರ್ಷದವಳು. ಅಣ್ಣಾ ಮದರಾಸಿಗೆ ಆಗಾಗ ಕೆಲಸದ ಪ್ರಯುಕ್ತ ಹೋಗುತ್ತಿದ್ದ. ಅಲ್ಲಿ ಚಿಕ್ಕ ಮಕ್ಕಳು ಉಡುವ ಪುಟ್ಟ ಸೀರೆ ದೊರೆಯುತ್ತಿತ್ತು. ಪಕ್ಕದ ಮನೆಯವರ ನನ್ನದೇ ವಯಸ್ಸಿನ ಅವರ ಮಗಳಿಗೆ ಅದನ್ನು ತಂದು ಕೊಡಿ ಎಂದಾಗ ಈ ಬಾರಿ ಆ ಕಡೆ ಹೋಗಲ್ಲ ಮುಂದಿನ ಸಾರಿ ತಂದು ಕೊಡುವೆ ಎಂದರು. ಯಾಕೆ ಹೀಗೆ ನೆಪ ಹೇಳಿದರು ಎಂದು ಅಮ್ಮನಿಗೆ ಅರ್ಥವಾಗಲಿಲ್ಲ.

ಅಣ್ಣನ ಕೇಳಿದಾಗ "ಅವರ ಮಗಳಿಗೆ ತಂದುಕೊಟ್ಟು ಸುಜಾತಂಗೆ ತರದಿದ್ರೆ ಪಾಪ ಅವಳಿಗೆ ಎಷ್ಟು ಬೇಸರವಾಗಬಹುದು ಊಹಿಸಿದ್ದೀಯಾ? ಮುಂದಿನ ಬಾರಿಯಷ್ಟು ಹೊತ್ತಿಗೆ ದುಡ್ಡು ಹೊಂದಿಸಿಕೊಂಡು ಇಬ್ಬರಿಗೂ ತರ್ತೀನಿ" ಅಂದಿದ್ದನ್ನ ನಾನೇ ಕೇಳಿಸಿಕೊಂಡಿದ್ದೆ. ಅವರು ದುಡ್ಡು ಕೊಟ್ಟು ತರಿಸಿಕೊಂಡರು ನಮ್ಮ ಅಣ್ಣನ ಬಳಿ ದುಡ್ಡಿಲ್ಲ ಅದಕ್ಕೆ ತರಲಿಲ್ಲ ಎಂದು ಅರ್ಥ ಮಾಡಿಕೊಳ್ಳುವ ವಯಸ್ಸು ಖಂಡಿತ ಅದಾಗಿರಲಿಲ್ಲ. ನಂತರ ಸ್ವಲ್ಪ ದೊಡ್ಡವಳಾದ ಮೇಲೆ ಅವರ ಆ ಸೂಕ್ಷ್ಮ ಅರ್ಥೈಸುವಿಕೆ ಪರಾನುಭೂತಿ ಮತ್ತು ಅದರ ಹಿಂದಿನ ನನ್ನ ಬಗೆಯ ಪ್ರೀತಿಯ ಆಳ ಅರ್ಥವಾಗಿತ್ತು.

ಅದಕ್ಕೇ ನನ್ನ ಅಣ್ಣ ಯಾವಾಗಲೂ ಗ್ರೇಟ್ ಅನ್ನೋದು ನಾನು. ನೀವು ತೋರಿಸಿದ ಪರಾನುಭೂತಿ ಪರರ ಕಷ್ಟದ ಕಡೆಗೆ ಸಂಕಟದ ಕಡೆಗೆ ಮಿಡಿಯುವ ಮನಸ್ಸು ಜೀವನದುದ್ದಕ್ಕೂ ನಮಗೆ ಬೆಂಗಾವಲಾಗಿ ಕಾದಿದೆ. ನೀವು ಬಿತ್ತೀದ ಅಕ್ಷರ ಪ್ರೀತಿಯ ಬೀಜ ಈಗ ಹೆಮ್ಮರವಾಗಿದೆ ಆದರೆ ಫಲ ಕಾಣುವ ಮೊದಲೇ ಕಾಲನ ಕರೆಗೆ ನೀವು ಹೋಗುತ್ತಿದ್ದು ಮಾತ್ರ ಎಂದಿಗೂ ಅಳಿಸಲಾಗದ ವಿಷಾದದ ಬರಹ ನಿಮ್ಮ ಬಗ್ಗೆ ಏನೆಂದು ಬರೆಯಲಿ ಹೇಗೆಂದು ಬರೆಯಲಿ ಬರೆಯುವಾಗಲೆಲ್ಲಾ ಕಣ್ಣಂಚು ಆರ್ದ್ರವಾಗುತ್ತದೆ, ಕಣ್ಣೀರ ಹನಿಗಳಲ್ಲಿ ಅಕ್ಷರಗಳು ಮಂಜಾಗುತ್ತವೆ.

ಅಕ್ಷರ ತಿದ್ದಿಸಿದಾಗಿನಿಂದ ಹಿಡಿದು ಆಧ್ಯಾತ್ಮದ ಬೋಧೆಯವರೆಗಿನ ಗುರುವೆಂದೇ ಜೀವನದ ಪ್ರತಿ ಹೆಜ್ಜೆಯಲ್ಲೂ ಕೈಹಿಡಿದು ನಡೆಸಿದ ಮಾರ್ಗದರ್ಶಿಯೆಂದೇ ಈಗಲೂ ಮೇಲಿಂದ ನಮ್ಮ ಕಷ್ಟ ಸುಖಗಳನ್ನು ನೋಡಿ ನಲಿವಲ್ಲಿ ಸಂತೋಷಿಸಿ ನೋವಿಗೆ ಧೈರ್ಯತುಂಬಿ ದಾರಿ ತೋರುತ್ತಿರುವ ಆ ದೇವರ ಪ್ರತಿರೂಪವೆಂದೇ .....ಶಬ್ದಗಳು ಅಸಮರ್ಥ ಪದಗಳು ಅಸಹಾಯಕ ಭಾವವೊಂದೇ ಪ್ರಾಧಾನ್ಯ ಅನುಭಾವವಷ್ಟೇ ಶಾಶ್ವತ. ಅಣ್ಣ? ನೀವಿಂದು ನಮ್ಮೊಂದಿಗೆ ಭೌತಿಕವಾಗಿ ಇರದಿದ್ದರೂ ನಮ್ಮೆಲ್ಲರ ಮನಸ್ಸಿನಲ್ಲಿ ಶಾಶ್ವತವಾಗಿದ್ದೀರಿ.

ಸಂತಸದ ಸಂಧರ್ಭಗಳಲ್ಲಿ ನಿಮ್ಮ ನೆನೆದು ಕಣ್ಣಂಚು ಆರ್ದ್ರ. ದುಃಖದ ವಿಷಯಗಳನ್ನಂತೂ ನಿಮ್ಮೊಡನೆ ಹಂಚಿಕೊಳ್ಳುತ್ತಾ ಕಂಬನಿ. ಮುಂದೆಲ್ಲಾ ಜನ್ಮಗಳಲ್ಲೂ ನೀವೇ ನನ್ನ ಅಪ್ಪನಾಗಬೇಕು. ಇಲ್ಲವೇ ನಾ ನಿಮಗೆ ಅಮ್ಮನಾಗಿ ಈ ಜನ್ಮದ ಋಣಭಾರ ಕಡಿಮೆ ಮಾಡಿಕೊಳ್ಳಬೇಕು.ಅದಕ್ಕೇ ಅಣ್ಣಾ? ಸಾವೆಂದರೆ ನನಗೆ ಅಂಜಿಕೆಯಿಲ್ಲ. ಏಕೆಂದರೆ ಆಗ ನಾನು ಮತ್ತೆ ನಿಮ್ಮನ್ನು ಭೇಟಿ ಆಗಬಹುದಲ್ಲಾ! ಅಪ್ಪಾ ಅಪ್ಪಾ ನಂಗೆ ನೀನು ಬೇಕಪ್ಪಾ



ಸುಜಾತಾ ರವೀಶ್ ಮೈಸೂರು

# ಅಡ್ಡ ಮತದಾನ ಶಾಸಕರಿಗೆ ಕ್ಷಮೆಯಿಲ್ಲ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಅವರು ಹೇಳಿದ್ದಾರೆ. ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಕ್ಷದ ಮೀರ್ ಸಾದಿಕರ ವಿರುದ್ಧ ಖಂಡಿತ ಶಿಸ್ತುಕ್ರಮ ಕೈಗೊಳ್ಳಲಾಗುವುದು. ಅಡ್ಡ ಮತದಾನವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ ಎಂದರು.**

ಎಂಟತ್ತು ದಿನಗಳ ಹಿಂದೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕರೆ ಮಾಡಿ ಮೂರನೇ ಅಭ್ಯರ್ಥಿ ಕಣಕ್ಕಿಳಿಸೋಣ ಎಂದು ಹೇಳಿದ್ದರು. ನೀವಾದರೂ ಹಾಕಿ ನಾವಾದರೂ ಹಾಕ್ತೇವೆ. ಒಳ್ಳೆ ಉದ್ದೇಶ ಇಟ್ಟುಕೊಂಡು ಫೈಟ್ ಮಾಡೋಣ ಎಂದಿದ್ದರು. ಆಗ ನೀವೇ ಅಭ್ಯರ್ಥಿ ಹಾಕಿ ಒಟ್ಟಾಗಿ ಸೆಣಸಾಟ ಮಾಡೋಣ ಎಂದು ತಿಳಿಸಿದ್ದೆ. ಎರಡೂ ಪಕ್ಷಗಳ ಉದ್ದೇಶ ಒಂದೇ ಆಗಿತ್ತು. ನಿನ್ನೆ ನಡೆದ ಮತದಾನದಲ್ಲಿ ಜೆಡಿಎಸ್‌ಯಿಂದ ಆರೇಳು ಅಡ್ಡ ಮತದಾನ ಆಗಿದೆ. ಬಿಜೆಪಿಯಿಂದ ನಾಲ್ಕೈದು ಅಡ್ಡ ಮತದಾನ ಆಗಿದೆ. ಇದರಿಂದ ಎರಡೂ ಪಕ್ಷಗಳಿಗೆ ಬೇಸರವಾಗಿದೆ ಎಂದು ಹೇಳಿದರು.

ಯಾರು ಅಡ್ಡ ಮತದಾನ ಮಾಡಿ ಆಟ ಆಡಿರಬಹುದು ಎಂಬ ಮಾಹಿತಿ ಸಿಕ್ಕಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ನೀಡಲು ಭೇಟಿ ಮಾಡಲು ಅವಕಾಶಕ್ಕೆ ಮನವಿ ಮಾಡಿದ್ದೇನೆ. ಅವರು ಯಾವಾಗ ಅವಕಾಶ ಕೊಟ್ಟರೂ ಭೇಟಿ ಮಾಡಿ ವಿವರ ನೀಡಲಿದ್ದೇನೆ ಎಂದು ವಿವರಿಸಿದರು. ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡ್ತಾರೆ ಎಂದರೆ ಅವರಿಗೆ



ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲದಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಎರಡೂ ಪಕ್ಷದ ಮುಖಂಡರು ಕುಳಿತು ತೀರ್ಮಾನ ಮಾಡಿದ್ದೆವು. ನಮ್ಮ ಪಕ್ಷದ ಇಬ್ಬರು ಗೆಲವು ಸಾಧಿಸಿರಬಹುದು.

ಆದರೆ ಅಡ್ಡ ಮತದಾನದಿಂದ ಅಪಮಾನ ಆಗಿದೆ. ಇದನ್ನೆಲ್ಲ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದರು.


ಗಂಭೀರವಾಗಿ ಪರಿಗಣನೆ : ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಪಕ್ಷದ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಅಧ್ಯಕ್ಷನಾಗುವುದಕ್ಕೂ ಮೊದಲು ನಾನು ಕಾರ್ಯಕರ್ತ. ಪಕ್ಷದ ಹೈಕಮಾಂಡ್ ಕಾಲಕಾಲಕ್ಕೆ ಏನೇನು ತೀರ್ಮಾನ ಮಾಡಬೇಕೋ ಅದನ್ನು ಮಾಡಲಿದೆ. ಇಂತಹ ಮಹತ್ವದ ಚುನಾವಣೆಯಲ್ಲಿ ಹೀಗೆ ಆಗುತ್ತದೆ ಎಂಬ ಕಲ್ಪನೆ ಇರಲಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚಾಣಕ್ಯ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಬಹಳ ಜನ ಚಾಣಕ್ಯರನ್ನು ರಾಜ್ಯದ ಜನ ನೋಡಿದ್ದಾರೆ. ಕುದುರೆ ಓಡೋ ಟೈಮಲ್ಲಿ ಓಡುತ್ತದೆ ಬೀಳೋ ಟೈಮಲ್ಲಿ ಬೀಳುತ್ತದೆ. ಬಿಜೆಪಿಗೆ ಎಲ್ಲವನ್ನೂ ಎದುರಿಸುವ ಶಕ್ತಿ ಇದೆ. ದೊಡ್ಡ ಸಂಘಟನೆ ಇದೆ. ಕಾರ್ಯಕರ್ತರ ಶಕ್ತಿ ಇದೆ. ಯಾರನ್ನು ಯಾವಾಗ ಹೇಗೆ ಬಗ್ಗಿಸಬೇಕು ಎಂಬುದು ತಿಳಿದಿದೆ ಎಂದರು. ಸಿಎಂ ಯಾರೇ ಆದರೂ ಹೆದರುವ ಪ್ರಶ್ನೆ ಇಲ್ಲ. ಸರ್ಕಾರ ಬಗ್ಗಿಸಲೂ ನಮಗೆ ಗೊತ್ತಿದೆ. ಇಂತಹ ಸಣ್ಣ ಪುಟ್ಟ ಘಟನೆಯಿಂದ ವಿಚಲಿತ ಆಗಿ ಓಡಿ ಹೋಗಲ್ಲ. ಎಲ್ಲವನ್ನು ಅರಗಿಸಿಕೊಳ್ಳಬಲ್ಲೇ ಎಂದರು.

## ‘ಪಂಚ ಯೋಜನೆಗಳ ಸರ್ವೆ ಕಾರ್ಯ’

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಫಲಾನುಭವಿಗಳ ಮರುಪರಿಶೀಲನೆಗೆ ಸರ್ಕಾರ ಸಿದ್ಧತೆ ನಡೆಸಿದೆ. ಅನರ್ಹ ಫಲಾನುಭವಿಗಳನ್ನು ಗುರುತಿಸಿ ಯೋಜನೆಗಳ ದುರುಪಯೋಗಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಅಧಿಕಾರಿಗಳ ಮೂಲಕ ಮನೆ-ಮನೆಗೆ ತೆರಳಿ ಕೆವೈಸಿ ಹಾಗೂ ಸರ್ವೇ ನಡೆಸಲು ಸರ್ಕಾರ ತೀರ್ಮಾನಿಸಿದೆ.**




ಹೊಸ ಅರ್ಜಿಗಳನ್ನು ಆಹ್ವಾನಿಸುವ ಬದಲಿಗೆ ಮರುಪರಿಶೀಲನೆ ಎಂಬ ಹೆಸರಿನಲ್ಲಿ ಪ್ರಕ್ರಿಯೆ ನಡೆಸಲು ಅಧಿಕಾರಿಗಳು ಮಾದರಿ ಅರ್ಜಿಯನ್ನು ಸಿದ್ಧಪಡಿಸಿದ್ದು, ಅದನ್ನು ಇಂದು ನಡೆದ ಗ್ಯಾರಂಟಿ ಯೋಜನೆಗಳ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಪ್ರದರ್ಶಿಸಿದರು. ಈ ಕುರಿತು ಅಂತಿಮ ತೀರ್ಮಾನ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳುವ ಸಾಧ್ಯತೆ ಇದೆ. ಮರುಪರಿಶೀಲನೆ ವೇಳೆ ಆಧಾರ್ ಜೊತೆಗೆ ಮತದಾರರ ಗುರುತಿನ ಚೀಟಿ ಸಂಖ್ಯೆ ಮತ್ತು ಪಡಿತರ ಚೀಟಿ ವಿವರಗಳನ್ನು ಕಡ್ಡಾಯವಾಗಿ ಪಡೆಯಲಾಗುತ್ತದೆ. ಪ್ರತಿಯೊಬ್ಬ ಫಲಾನುಭವಿಯ ಮನೆಗೆ ತೆರಳಿ ದಾಖಲೆ ಪರಿಶೀಲನೆ, ಸ್ಥಳ ಪರಿಶೀಲನೆ ಮತ್ತು ಕೆವೈಸಿ ನಡೆಸಿ ವರದಿ ಸಿದ್ಧಪಡಿಸಲಾಗುತ್ತದೆ. ದುರುಪಯೋಗಕ್ಕೆ ಬ್ರೇಕ್: ಹೊರ ರಾಜ್ಯದವರು, ಆರ್ಥಿಕವಾಗಿ ಸಬಲರು, ಅಧಿಕಾರಿಗಳು, ವ್ಯಾಪಾರಿಗಳು ಸೇರಿದಂತೆ ಅನರ್ಹರು ಯೋಜನೆಗಳ ಲಾಭ ಪಡೆಯುತ್ತಿರುವ ಆರೋಪಗಳ ಹಿನ್ನೆಲೆಯಲ್ಲಿ ಈ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಮೃತ ಫಲಾನುಭವಿಗಳ ಖಾತೆಗಳಿಗೆ ಹಣ ಜಮೆಯಾಗುತ್ತಿರುವುದು, ಒಂದೇ ಖಾತೆಗೆ ಹಲವು ಫಲಾನುಭವಿಗಳ ಹಣ ವರ್ಗಾವಣೆಯಾಗಿರುವುದು ಹಾಗೂ ಒಬ್ಬರೇ ಹಲವು ಖಾತೆಗಳನ್ನು ನೋಂದಾಯಿಸಿರುವುದು ಆಡಿಟರ್ ಜನರಲ್ ವರದಿಯಲ್ಲಿ ಉಲ್ಲೇಖವಾಗಿರುವುದರಿಂದ ಸರ್ಕಾರ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ. ಒಬ್ಬ ಅರ್ಹ ಫಲಾನುಭವಿಗೂ ತೊಂದರೆಯಾಗಬಾರದು. ಅನರ್ಹರನ್ನು ಮಾತ್ರ ಗುರುತಿಸಿ ಯೋಜನೆಯ ದುರುಪಯೋಗ ತಡೆಯಬೇಕು ಎಂದು ಅಧಿಕಾರಿಗಳಿಗೆ ಸಿಎಂ ಸೂಚಿಸಿದ್ದಾರೆ.ಬ್ಯಾಂಕ್ ಸಾಲದ ಖಾತೆಗೆ ಗೃಹಲಕ್ಷ್ಮಿ ಹಣ ಜಮೆಯಾಗುತ್ತಿದ್ದ ಕಾರಣ ಖಾತೆ ಬದಲಾಯಿಸಿಕೊಂಡಿರುವ ಮಹಿಳೆಯರಿಗೂ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ವಾಯ್?ಸ ಮೆಸೇಜ್ ವ್ಯವಸ್ಥೆ; ಗೃಹಲಕ್ಷ್ಮಿ ಹಣ ಖಾತೆಗೆ ಜಮೆಯಾದ ಕೂಡಲೇ ಫಲಾನುಭವಿಗಳ ಮೊಬೈಲ್‌ಗೆ ವಾಯ್?ಸ ಮೆಸೇಜ್ ಮೂಲಕ ಮಾಹಿತಿ ತಲುಪಿಸುವ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆಯೂ ಚರ್ಚೆ ನಡೆಯಿತು. ಗೃಹಜ್ಯೋತಿ ಯೋಜನೆಯಡಿ 1.65 ಕೋಟಿ ಫಲಾನುಭವಿಗಳಿಗೆ ಲಾಭ.ಹೊರ ರಾಜ್ಯದವರು ಗೃಹಜ್ಯೋತಿ ಸೌಲಭ್ಯ ಪಡೆಯುತ್ತಿರುವ ಕುರಿತು ಮಾಹಿತಿ ಸಂಗ್ರಹಿಸಲು ಸೂಚನೆ.

# ರೋಗ ಮುಕ್ತ ಸಮಾಜಕ್ಕೆ ‘ಯೋಗ’ ಪೂರಕ ; ಮಾಜಿ ಶಾಸಕ ಪರಣ್ಣ ಮನವಳ್ಳಿ




ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಈ ಆಧುನಿಕ ಯುಗದಲ್ಲಿ ಪಾರಂಪರಿಕ ಆಹಾರ ಪದ್ದತಿಯನ್ನು ಅಳವಡಿಸಿಕೊಳ್ಳುವೂದರ ಜೊತೆ ರೋಗ ಮುಕ್ತ ಸಮಾಜಕ್ಕೆ ಯೋಗ ಅಭ್ಯಾಸ ಪೂರಕವಾಗಿದೆ ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಹೇಳಿದರು.**

ಅವರು ಸರ್ವ ಯೋಗ ಧ್ಯಾನ ಆಧ್ಯಾತ್ಮಿಕ ಬಳಗ ಮತ್ತು ಸ್ಪೂರ್ತಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ಅಂತರಾಷ್ಟ್ರೀಯ 12ನೆಯ ಯೋಗ ದಿನಾಚರಣೆಯ ಪ್ರಯುಕ್ತ ಶನಿವಾರದಂದು ಎಪಿಎಂಸಿ ಆವರಣದಿಂದ ಬೃಹತ್ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು. ಸಕಲ ರೋಗಗಳನ್ನು ನಿವಾರಿಸುವ ಶಕ್ತಿ ಯೋಗ ಹೊಂದಿದ್ದು ದೀರ್ಘಾಯುಷ್ಯಕ್ಕೆ ಅತ್ಯಂತ ಪೂರಕವಾಗಿದೆ.

ಯೋಗ ಶಿಕ್ಷಣವನ್ನು ಪ್ರಾಥಮಿಕ ಹಂತದಿಂದಲೇ ಶಾಲೆಗಳಲ್ಲಿ ಪಠ್ಯ ಚಟುವಟಿಕೆಯನ್ನಾಗಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮುಂದಾಗಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ರಘುನಾಥ್ ಪವಾರ, ಗೀತಾ ವಿಕ್ರಂ, ಬಸವರಾಜ. ಪಂಪಣ್ಣ, ಮನೋಹರ್ ಸೇರಿದಂತೆ ವಿವಿಧ ಸಂಘಟನೆಗಳ ಅಧ್ಯಕ್ಷರು ಪದಾಧಿಕಾರಿಗಳು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಜಾಥಾವು ಸಿಬಿಎಸ್ ವೃತ್ತ ಮಹಾವೀರ ವೃತ್ತ ಗಾಂಧಿವೃತ್ತ ಅಂಬೇಡ್ಕರ್ ವೃತ್ತದ ಬಳಿ ಆಗಮಿಸಿ ವಿಸರ್ಜನೆ ಗೊಳಿಸಲಾಯಿತು ದಾರಿ ಉದ್ದಕ್ಕೂ ಯೋಗ ಕುರಿತು ಬ್ಯಾನರ್ ಬಿತ್ತಿ ಪತ್ರ ಮೂಲಕ ಜಾಗೃತಿಗೊಳಿಸಲಾಯಿತು. ವಿವಿಧ ಯೋಗ ಶಿಕ್ಷಣಕೇಂದ್ರದ ಮುಖ್ಯಸ್ಥರು ಸದಸ್ಯರು ಜಾಥಾದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

# ಗಂಗಾವತಿ :ಛಾಯಾಗ್ರಾಹಕರ ಸಂಘದ ಸಭೆ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ತಾಲೂಕು ಛಾಯಾಗ್ರಾಹಕರ ಸಂಘದ ಸಭೆ ಶನಿವಾರದಂದು ಛಾಯಾಗ್ರಾಹಕರ ಸಮ್ಮುಖದಲ್ಲಿ ನಡೆಯಿತು. ಸಭೆಯಲ್ಲಿ ಛಾಯಾಗ್ರಾಹಕರಿಗಾಗಿ ಜಾರಿಗೆ ತರಲಾಗಿರುವ “ಆಸರೆ ಯೋಜನೆ” ಸದಸ್ಯತ್ವ ನೋಂದಣಿಗೆ ಚಾಲನೆ ನೀಡಲಾಯಿತು.**

ಸಭೆಯಲ್ಲಿ ಕರ್ನಾಟಕ ಛಾಯಾಚಿತ್ರ ಗ್ರಾಹಕರ ಸಂಘದ ರಾಜ್ಯ ನಿರ್ದೇಶಕ ರಾಜಶೇಖರ ಶಾಗೋಟಿ ಮಾತನಾಡಿ ಪ್ರತಿಯೊಬ್ಬ ಛಾಯಾಗ್ರಾಹಕರು ಆಸರೆ ಯೋಜನೆಯ ಸದಸ್ಯರಾಗುವಂತೆ ಕರೆ ನೀಡಿದರು. ಈ ಯೋಜನೆಯಡಿ ಪ್ರತಿಯೊಬ್ಬ ಸದಸ್ಯರ ಕುಟುಂಬಕ್ಕೆ ರೂ. 1 ಲಕ್ಷದ ಭದ್ರತಾ ಸೌಲಭ್ಯ



ಕಲ್ಪಿಸಲಾಗಿದ್ದು, ಸದಸ್ಯರು ಆಕಸ್ಮಿಕವಾಗಿ ಮರಣ ಹೊಂದಿದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಕರ್ನಾಟಕ ಛಾಯಾಗ್ರಾಹಕರ ಸಂಘದಿಂದ ರೂ. 1 ಲಕ್ಷ ನೆರವು ನೀಡಲಾಗುತ್ತದೆ ಎಂದು ತಿಳಿಸಿದರು.

ಛಾಯಾಗ್ರಾಹಕರ ಸುರಕ್ಷತೆ ಮತ್ತು ಅವರ ಕುಟುಂಬಗಳ ಆರ್ಥಿಕ ಭದ್ರತೆ ಕರ್ನಾಟಕ ಛಾಯಾಗ್ರಾಹಕರ ಸಂಘದ ಪ್ರಮುಖ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ಆಸರೆ ಯೋಜನೆ ಮಹತ್ವದ ಹೆಜ್ಜೆಯಾಗಿದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಗಂಗಾವತಿ ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಷಡಕ್ಷರಯ್ಯ ಹಿರೇಮಠ, ತಾಲೂಕು ಉಪಾಧ್ಯಕ್ಷ ಹುಸೇನಸಾಬ, ತಾಲೂಕು ಮಾಜಿ ಅಧ್ಯಕ್ಷ ಉಪೀ ನಾಗರಾಜ ಕುಂಬಾರ, ಚಾಂದಪಾಷ,ಬಸವರಾಜಸ್ವಮಿ ಮರಳಿ, ಪದಾಧಿಕಾರಿಗಳು ಹಾಗೂ ತಾಲೂಕಿನ ವಿವಿಧ ಭಾಗಗಳ ಛಾಯಾಗ್ರಾಹಕರು ಭಾಗವಹಿಸಿ, ಯೋಜನೆಯ ಕುರಿತು ಮಾಹಿತಿ ಪಡೆದು ಸದಸ್ಯತ್ವ ನೋಂದಣಿಯಲ್ಲಿ ಆಸಕ್ತಿ ತೋರಿದರು.

# ವಿಧಾನಪರಿಷತ್‌ಗೆ ಗುಪ್ತ ಮತದಾನ ಏಕೆ..? ಶಾಸಕ ಸುರೇಶ್‌ಕುಮಾರ್ ಪ್ರಶ್ನೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ಏಜೆಂಟರಿಗೆ ತೋರಿಸಿ ಮತ ಹಾಕಬೇಕು. ಆದರೆ ವಿಧಾನಪರಿಷತ್ ಚುನಾವಣೆಯಲ್ಲಿ ಶಾಸಕರು ಗುಪ್ತ ಮತದಾನ ಕಾಪಾಡಿಕೊಳ್ಳಬೇಕು ಎಂಬ ದ್ವಂದ್ವ ನೀತಿ ಏಕೆ ಎಂದು ಮಾಜಿ ಸಚಿವ ಸುರೇಶ್‌ಕುಮಾರ್ ಚುನಾವಣಾಧಿಕಾರಿಗಳಿಗೆ ಪ್ರಶ್ನಿಸಿದ್ದಾರೆ. ಈ ಕುರಿತು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಪತ್ರ ಬರೆದಿರುವ ಸುರೇಶ್‌ಕುಮಾರ್, ರಾಜ್ಯಸಭೆಯ ಚುನಾವಣೆಗಳು ಅವಿರೋಧವಾಗಿ ಆಗಿರದಿದ್ದರೆ ರಾಜ್ಯಸಭೆಯ ಮತ್ತು ವಿಧಾನ ಪರಿಷತ್ತಿನ ಚುನಾವಣೆಗಳು ಒಂದೇ ದಿನ ನಡೆಯುತ್ತಿದ್ದವು.**



ರಾಜ್ಯಸಭೆಯ ಚುನಾವಣೆಯಲ್ಲಿ ಮತಪತ್ರವನ್ನು ವಿಧಾನಸಭಾ ಸದಸ್ಯರು ಅಲ್ಲಿ ಕುಳಿತಿದ್ದ ತಮ್ಮ ಏಜೆಂಟರಿಗೆ ತೋರಿಸಿ ಹಾಕಬೇಕಿತ್ತು. ಆದರೆ ಅದೇ ವಿಧಾನಸಭಾ ಸದಸ್ಯರು ವಿಧಾನಪರಿಷತ್ತಿಗೆ ಮತ ಚಲಾಯಿಸುವಾಗ ಗೌಪ್ಯತೆ ಕಾಪಾಡಿಕೊಳ್ಳಬೇಕಿತ್ತು. ಈ ಎರಡೂ ಚುನಾವಣೆಗಳಲ್ಲಿ ವಿಧಾನಸಭಾ ಸದಸ್ಯರು ಮತದಾರರಾಗಿ ವರ್ತಿಸಬೇಕಾದ ರೀತಿಯಲ್ಲಿ ಈ ದ್ವಂದ್ವ ನೀತಿ ಏಕೆ? ಈ ರೀತಿಯ ನಿಯಮಾವಳಿಗಳ ಹಿಂದೆ ಇರುವ ಉದ್ದೇಶವೇನು? ದಯವಿಟ್ಟು ಈ ಗೊಂದಲಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಕೋರಿದ್ದಾರೆ.

ನಮ್ಮ ರಾಜ್ಯದಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಹಾಗೂ ರಾಜ್ಯದ ವಿಧಾನಪರಿಷತ್‌ಗೆ ಸಂಬಂಧಿಸಿದಂತೆ ವಿಧಾನಸಭೆಯಿಂದ ಏಳು ಸ್ಥಾನಗಳಿಗೆ ಚುನಾವಣೆಗಳು ನಡೆಯಿತು. ರಾಜ್ಯಸಭೆಯ ಚುನಾವಣೆಗಳು ಅವಿರೋಧವಾಗಿ ನಡೆದವು. ವಿಧಾನಪರಿಷತ್ತಿನ ಚುನಾವಣೆಗೆ ಏಳು ಸ್ಥಾನಗಳಿಗೆ 8 ಅಭ್ಯರ್ಥಿಗಳು ಇದ್ದದ್ದರಿಂದ ಚುನಾವಣೆ ಅನಿವಾರ್ಯವಾಗಿತ್ತು ಎಂದು ಹೇಳಿದ್ದಾರೆ. ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ಮತದಾರರು ವಿಧಾನಸಭಾ ಸದಸ್ಯರೇ ಆಗಿದ್ದರು.

ರಾಜ್ಯಸಭೆಗೆ ನಡೆದ ಚುನಾವಣೆಗಳಲ್ಲಿ ವಿಧಾನಸಭೆಯ ಸದಸ್ಯರು ಮತ ಚಲಾಯಿಸುವಾಗ, ತಾವು ಗುರುತು ಮಾಡಿದ ಮತ ಚೀಟಿಯನ್ನು ತೋರಿಸಿ ಹಾಕಬೇಕಿತ್ತು. ಆದರೆ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ಇದೇ ವಿಧಾನಸಭಾ ಸದಸ್ಯರಿಗೆ ಗೌಪ್ಯ ಮತದಾನದ ಸೌಲಭ್ಯ ದೊರೆತಿತ್ತು ಎಂದು ಪತ್ರದಲ್ಲಿ ಸುರೇಶ್‌ಕುಮಾರ್ ಉಲ್ಲೇಖಿಸಿದ್ದಾರೆ.

# ಬಾಲಕೃಷ್ಣಗೆ ಸಚಿವ ಸ್ಥಾನ ಮಿಸ್..? ಮಂತ್ರಿಗಿರಿಗಾಗಿ ಒಕ್ಕಲಿಗ ಶಾಸಕರು ನಾನಾ ಕಸರತ್ತು

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸದ್ಯದಲ್ಲೇ ತಮ್ಮ ಸಂಪುಟ ವಿಸ್ತರಣೆ ಮಾಡಲಿದ್ದು, ಸಂಪುಟ ಸೇರಲು ಒಕ್ಕಲಿಗ ಶಾಸಕರು ನಾನಾ ರೀತಿಯ ಕಸರತ್ತು ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಸೇರಿದಂತೆ ಮೂವರು ಒಕ್ಕಲಿಗ ಶಾಸಕರು ಸಂಪುಟದಲ್ಲಿದ್ದಾರೆ. ಇನ್ನೂ ಮೂವರು ಶಾಸಕರಿಗೆ ಸಂಪುಟದಲ್ಲಿ ಅವಕಾಶ ದೊರೆಯುವ ಸಾಧ್ಯತೆಗಳಿವೆ ಎಂದು ಉನ್ನತ ಮೂಲಗಳು ತಿಳಿಸಿವೆ.**

ಕೃಷ್ಣಭೈರೇಗೌಡ ಹಾಗೂ ರಾಮಲಿಂಗಾರೆಡ್ಡಿಯವರು ಡಿ.ಕೆ.ಶಿವಕುಮಾರ್‌ರವರ ಸಂಪುಟದಲ್ಲಿ ಸಚಿವರಾಗಿದ್ದಾರೆ. ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ, ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ, ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಟಿ.ಬಿ.ಜಯಚಂದ್ರ, ಡಾ.ಎಂ.ಸಿ.ಸುಧಾಕರ್, ಗುಬ್ಬಿ ಶಾಸಕ ಶ್ರೀನಿವಾಸ್, ವಿಜಯನಗರ ಶಾಸಕ ಎಂ.ಕೃಷ್ಣಪ್ಪ,



ಗೋವಿಂದರಾಜನಗರ ಶಾಸಕ ಪ್ರಿಯಾಕೃಷ್ಣ, ಶ್ರೀರಂಗಪಟ್ಟಣದ ಶಾಸಕ ರಮೇಶ್ ಬಂಡಿ ಸಿದ್ದೇಗೌಡ ಸೇರಿದಂತೆ ಹಲವು ಒಕ್ಕಲಿಗ ಶಾಸಕರು ಸಂಪುಟ ಸೇರಲು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ. ರಾಮನಗರ ಜಿಲ್ಲೆಯಿಂದ ಡಿ.ಕೆ.ಶಿವಕುಮಾರ್‌ರವರು ಮುಖ್ಯಮಂತ್ರಿಯಾಗಿರುವುದರಿಂದ ಮಾಗಡಿ ಶಾಸಕ ಬಾಲಕೃಷ್ಣ ಅವರಿಗೆ ಸಚಿವ ಸ್ಥಾನ ನೀಡಿದರೆ ಒಂದೇ ಜಿಲ್ಲೆಗೆ ಹೆಚ್ಚು ಪ್ರಾತಿನಿಧ್ಯ ನೀಡಿದಂತಾಗುತ್ತದೆ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.

ಬೆಂಗಳೂರು ನಗರದಲ್ಲಿ ಈಗಾಗಲೇ ಇಬ್ಬರು ಸಚಿವರಿದ್ದು, ಮತ್ತೊಬ್ಬರಿಗೆ ಅವಕಾಶ ಮಾಡಿಕೊಟ್ಟರೆ ಬೇರೆ ಜಿಲ್ಲೆಗೆ ಪ್ರಾತಿನಿಧ್ಯ ತಪ್ಪಿದಂತಾಗುತ್ತದೆ ಎಂಬ ಚರ್ಚೆಗಳು ಕಾಂಗ್ರೆಸ್‌ನಲ್ಲಿ ನಡೆಯುತ್ತಿವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮತ್ತೆ ಸುಧಾಕರ್‌ರವರಿಗೆ ಅವಕಾಶ ಮಾಡಿಕೊಡುವ ಸಾಧ್ಯತೆ ಇದೆ. ಹಾಸನ ಜಿಲ್ಲೆಗೆ ಪ್ರಾತಿನಿಧ್ಯ ಇಲ್ಲದಿರುವುದರಿಂದ ಶಿವಲಿಂಗೇಗೌಡ ಅವರಿಗೆ ಅವಕಾಶ ಮಾಡಿಕೊಟ್ಟರೂ ಅಚ್ಚರಿ ಪಡಬೇಕಿಲ್ಲ. ಮಂಡ್ಯ ಜಿಲ್ಲೆಯಲ್ಲಿ ರಮೇಶ್ ಬಂಡಿ ಸಿದ್ದೇಗೌಡ ಅಥವಾ ಚೆಲುವರಾಯಸ್ವಾಮಿ ಇಬ್ಬರಲ್ಲಿ ಒಬ್ಬರಿಗೆ ಸಂಪುಟದಲ್ಲಿ ಸೇರ್ಪಡೆಗೆ ಅವಕಾಶ ನೀಡುವ ಸಾಧ್ಯತೆಗಳಿವೆ ಎನ್ನಲಾಗಿದೆ. ಆದರೆ ಪಿ.ಎಂ.ನರೇಂದ್ರಸ್ವಾಮಿಯವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡರೆ ಮಂಡ್ಯ ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನವನ್ನು ನೀಡುವುದು ವಿರಳ ಎನ್ನಲಾಗುತ್ತಿದೆ.

ತುಮಕೂರು ಜಿಲ್ಲೆಯಿಂದ ಡಾ.ಜಿ.ಪರಮೇಶ್ವರ್‌ರವರು ಉಪಮುಖ್ಯಮಂತ್ರಿಯಾಗಿರುವುದರಿಂದ ಆ ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನ ನೀಡಬೇಕೇ, ಬೇಡವೇ ಎಂಬ ಜಿಜ್ಞಾಸೆಯೂ ನಡೆಯುತ್ತಿದ್ದು, ಜಯಚಂದ್ರ ಅಥವಾ ಶ್ರೀನಿವಾಸ್ ಅವರಿಬ್ಬರಲ್ಲಿ ಒಬ್ಬರಿಗೆ ಸಚಿವ ಸ್ಥಾನ ದೊರೆಯುವ ಸಾಧ್ಯತೆಗಳು ಇವೆ ಎಂದು ಉನ್ನತ ಮೂಲಗಳು ತಿಳಿಸಿವೆ. 2 ರಿಂದ 3 ಮಂದಿ ಒಕ್ಕಲಿಗ ಶಾಸಕರಿಗಷ್ಟೇ ಸಂಪುಟ ಸೇರಲು ಅವಕಾಶ ಇದೆ ಎಂದು ಕಾಂಗ್ರೆಸ್ ಪಾಳಯದಲ್ಲಿ ಚರ್ಚೆಯಾಗುತ್ತಿದ್ದು, ಯಾರಿಗೆ ಅದೃಷ್ಟ ಒಲಿಯುವುದೋ ಕಾದುನೋಡಬೇಕು. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಡಿ.ಕೆ.ಶಿವಕುಮಾರ್ ಅವರಲ್ಲದೆ ಎನ್.ಚಲುವರಾಯಸ್ವಾಮಿ, ಡಾ.ಎಂ.ಸಿ.ಸುಧಾಕರ್, ಕೃಷ್ಣಭೈರೇಗೌಡ, ರಾಮಲಿಂಗಾರೆಡ್ಡಿ, ವೆಂಕಟೇಶ್ ಹಾಗೂ ಎಚ್.ಕೆ.ಪಾಟೀಲ್ ಅವರು ಸಚಿವರಾಗಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka